# ಮರೆಯಲಾಗದ ಭಗತ್‌ಸಿಂಗ್



ಜ. ಹೊ. ನಾರಾಯಣಸ್ವಾಮಿ

ಭಾರತ ಜ್ಞಾನ ವಿಜ್ಞಾನ ಸಮಿತಿ

# ಮರೆಯಲಾಗದ
# ಭಗತ್ ಸಿಂಗ್

ಜ.ಹೊ. ನಾರಾಯಣಸ್ವಾಮಿ

ಭಾರತ ಜ್ಞಾನ ವಿಜ್ಞಾನ ಸಮಿತಿ
ಭಾರತೀಯ ವಿಜ್ಞಾನ ಮಂದಿರದ ಆವರಣ
ಬೆಂಗಳೂರು-12 ದೂರವಾಣಿ : 3342384

**Mareyalagada Bhagath Singh** : A series of Desha Thiliyona Desha Badalisona, in the programme of Our National Movement. Written by J.H. Narayana Swamy on behalf of Bharath Gyan Vigyan Samithi, Karnataka.

1998

Pages : + 4

© Bharat Gyan Vigyan Samithi, Karnatak State

Rs. 10/-

Copies : 3000

**Published by**

Shri C.Yathiraju,
Secretary,
**Bharath Gyan Vigyan Samithi**
Indian Institute of Science Campus
Bangalore - 560 012
Phone : 3342384

DTP:
**Ankita DTP Centre**
No. 6, 7th Main, S.R.Nagar, Bangalore-560 027

Printed at:
**Akshara Vinyasa**
No. 24, 5th Main
Gandhinagar, Bangalore- 560009
Phone: 2200783

HEALTH CELL
LIBRARY AND
05208

# ಮುನ್ನುಡಿ

ಐವತ್ತನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ದೇಶ ತಿಳಿಯೋಣ-ದೇಶ ಬದಲಿಸೋಣ ಕಾರ್ಯಕ್ರಮದ ಭಾಗವಾದ ನಮ್ಮ ರಾಷ್ಟ್ರೀಯ ಚಳುವಳಿ ಶಿಬಿರಗಳಿಗೆ ಸಹಾಯವಾಗುವಂತೆ ಈ ಕಿರುಪುಸ್ತಕ ಪ್ರಕಟಿಸಲಾಗುತ್ತಿದೆ. ಈ ಪುಸ್ತಕ ಹೊರತರಲು ಧನ ಸಹಾಯ ಮಾಡಿದ ಡಿ.ಎಸ್.ಇ.ಆರ್.ಟಿ. ಹಾಗೂ ಇಡೀ ಕಾರ್ಯಕ್ರಮಕ್ಕೆ ಬೆನ್ನೆಲುಬಾಗಿರುವ ಶಿಕ್ಷಣ ಇಲಾಖೆಗೆ ಭಾರತ ಜ್ಞಾನ ವಿಜ್ಞಾನ ಸಮಿತಿ ಧನ್ಯವಾದಗಳನ್ನು ಅರ್ಪಿಸುತ್ತದೆ. ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಚಳುವಳಿ ಬಗ್ಗೆ ಅರಿವು, ಗೌರವ ಮೂಡಿಸುವಲ್ಲಿ ಹಾಗೂ ದೇಶಭಕ್ತಿ ಮೂಡಿಸುವಲ್ಲಿ ಈ ಪುಸ್ತಕ ಸಹಾಯಕವಾಗಲಿ ಎಂದು ಆಶಿಸುತ್ತೇವೆ. ತುರ್ತು ಸಮಯದಲ್ಲಿ ಈ ಪುಸ್ತಕ ರಚಿಸಿಕೊಟ್ಟ ಪ್ರಗತಿಪರ ಲೇಖಕರಾದ ಶ್ರೀ ಜಿ.ಹೊ.ನಾರಾಯಣಸ್ವಾಮಿ, ಚಿತ್ರ ರಚಿಸಿಕೊಟ್ಟ ಶ್ರೀ ಬಿ.ಎಸ್.ದೇಸಾಯಿ, ಡಿಟಿಪಿ ಮಾಡಿಕೊಟ್ಟ ಅಂಕಿತ ಗ್ರಾಫಿಕ್ಸ್‌ನವರಿಗೂ, ಮುದ್ರಿಸಿಕೊಟ್ಟ ಅಕ್ಷರ ವಿನ್ಯಾಸದವರಿಗೂ ಭಾರತ ಜ್ಞಾನ ವಿಜ್ಞಾನ ಸಮಿತಿ ಧನ್ಯವಾದಗಳನ್ನು ಸಲ್ಲಿಸುತ್ತದೆ.

ಕಾರ್ಯದರ್ಶಿ

**ಭಾರತ ಜ್ಞಾನ ವಿಜ್ಞಾನ ಸಮಿತಿ**

# ಲೇಖಕರ ಮಾತು

ಭಾರತ ಜ್ಞಾನ ವಿಜ್ಞಾನ ಸಮಿತಿಯವರು 'ದೇಶ ತಿಳಿಯೋಣ ದೇಶ ಬದಲಿಸೋಣ' ಕಾರ್ಯಕ್ರಮದಡಿ ಪ್ರೌಢಶಾಲಾ ಶಿಕ್ಷಕರಿಗಾಗಿ ಹಾಗೂ ವಿದ್ಯಾರ್ಥಿಗಳಿಗಾಗಿ ಸ್ಫೂರ್ತಿ ತುಂಬುವ ನಮ್ಮ ರಾಷ್ಟ್ರೀಯ ಚಳುವಳಿಗೆ ಸಂಬಂಧಿಸಿದ ದೃಷ್ಟಿಯಿಂದ ಕಿರುಹೊತ್ತಿಗೆಗಳನ್ನು ಪ್ರಕಟಿಸುತ್ತಿರುವ ಕಾರ್ಯ ಉಪಯುಕ್ತವಾದುದಾಗಿದೆ. ಈ ಕೆಲಸ ದೇಶಕ್ಕೆ ಸ್ವಾತಂತ್ರ್ಯ ಬಂದ ಮೊದಲ ದಶಕದಲ್ಲೆ ಆಗಬೇಕಾಗಿತ್ತು. ಐದು ದಶಕಗಳ ನಂತರವಾದರೂ ಈ ಕಾರ್ಯ ಆಗುತ್ತಿರುವುದು ಆಶಾದಾಯಕವಾಗಿದೆ.

ಸುಮಾರು 5 ಕೃತಿಗಳನ್ನು ಹೊರತರುವ ಗುರಿ ಇಟ್ಟುಕೊಂಡು ರಾಷ್ಟ್ರದ ಮಹಾನ್ ನಾಯಕರ, ಚಿಂತಕರ, ಹೋರಾಟಗಾರರ ಜೀವನ ಸಾಧನೆಗಳನ್ನು ಕುರಿತು ಓದುಗರಲ್ಲಿ ಸ್ಫೂರ್ತಿಯ ಸೆಲೆ ಒಡೆಯುವಂತೆ ಮಾಡುವುದು ಈ ಯೋಜನೆಯ ಗುರಿಯಾಗಿದೆ. ಈ ಮಾಲಿಕೆಯಲ್ಲಿ ನನಗೆ 'ಮರೆಯಲಾಗದ ಭಗತ್ ಸಿಂಗ್' ಎಂಬ ಕೃತಿರಚನೆಗೆ ಅವಕಾಶ ಮಾಡಿಕೊಟ್ಟ ಸಮಿತಿಯವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಕೃತಿ ರಚನೆಯ ಸಂದರ್ಭದಲ್ಲಿ ನನ್ನ ಮಗಳು ಜೆ.ಎನ್.ತೇಜಶ್ರೀ ನೀಡಿದ ಸಹಕಾರ ಮರೆಯಲಾಗದ್ದು. ಸದಾ ಪ್ರೀತಿಯ ಮಳೆಗರೆವ ಗೆಳೆಯರಾದ ಈ. ಬಸವರಾಜು ಮತ್ತು ಗೆಳೆಯರಿಗೆ ನಾನು ಋಣಿ.

ಈ ಕೃತಿ ಓದುಗರನ್ನು ಹೊಸ ಚಿಂತನೆಗೆ ಹಚ್ಚಿದರೆ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

**ಹಾಸನ** **ಜ.ಹೊ.ನಾ.**

# ಅಧ್ಯಾಯ ೧

ಹನ್ನೆರಡು ವರ್ಷದ ಬಾಲಕನೋರ್ವ ರಾತ್ರಿ ನಿದ್ರೆ ಬಾರದೆ ಹಾಸಿಗೆಯಲ್ಲಿ ನರಳುತ್ತಾ ಅತ್ತಿಂದಿತ್ತ ಹೊರಳಾಡುತ್ತಿದ್ದಾನೆ. ಕಣ್ಣಿನಿಂದ ನೀರು ಧಾರಾಕಾರವಾಗಿ ಸುರಿಯುತ್ತಿದೆ. ಕೈಯಲ್ಲಿ ಒಂದು ಡಬ್ಬಿ ಹಿಡಿದಿದ್ದಾನೆ. ಅದನ್ನು ಎದೆಗೆ ಅವುಚಿಕೊಳ್ಳುತ್ತಾನೆ. ಒಮ್ಮೆ ತುಟಿಗೆ ಹಿಡಿದು ಮುತ್ತಿಟ್ಟು ಮತ್ತೊಮ್ಮೆ ಕಣ್ಣಿಗೊತ್ತಿಕೊಂಡು ನಿಟ್ಟುಸಿರು ಬಿಡುತ್ತಿದ್ದಾನೆ. ಆ ಡಬ್ಬಿಯನ್ನೆ ನೋಡುತ್ತಾ ಎದ್ದು ಕುಳಿತು ಬಿಕ್ಕಿಬಿಕ್ಕಿ ಅಳುತ್ತಿದ್ದಾನೆ.

ಮಧ್ಯರಾತ್ರಿಯಲ್ಲಿ ಈ ಬಿಕ್ಕಳಿಕೆಯನ್ನು ಕೇಳಿ ಎದ್ದು ಬಂದ ಆತನ ತಂಗಿ ಅಣ್ಣಾ ಏಕೆ ಅಳುತ್ತಿದ್ದಾನೆ ಎಂಬ ಕಾರಣ ತಿಳಿಯದೆ ಸ್ವಲ್ಪ ಹೊತ್ತು ನಿಟ್ಟಿಸಿ ನೋಡುತ್ತಾಳೆ. ಇದರ ಪರಿವೆಯೆ ಇರದ ಅವನ ದುಃಖ ಕೋಡಿ ಹರಿಸಿದಂತೆ ಹೊರಹೊಮ್ಮುತ್ತಿದೆ. ಭಯಪಟ್ಟ ತಂಗಿ ಅಣ್ಣನನ್ನು ಮಾತನಾಡಿಸುವ ಧೈರ್ಯವಿರದೆ ತನ್ನ ಕೋಣೆಗೆ ಹೋಗಿ ಮಲಗುತ್ತಾಳೆ.

ಬೆಳಗಾದಾಗ ಎದ್ದು ಬಂದ ತಂಗಿ ಅಣ್ಣನ ಕೊಠಡಿಯಲ್ಲಿ ನೋಡುತ್ತಾಳೆ. ಹಾಸಿಗೆಯ ಮೇಲೆ ಕುಳಿತು ತನ್ನ ಕೈಯಲ್ಲಿರುವ ಡಬ್ಬಿಯನ್ನು ನೆಟ್ಟಕಣ್ಣು ನೆಟ್ಟಂತೆ ನೋಡುತ್ತಿದ್ದಾನೆ. ಚಲನೆ ಇಲ್ಲ. ಹಾಸಿಗೆಯ ಮೇಲೆ ಒಂದು ಪ್ರತಿಮೆ ಕುಳಿತಂತೆ ಕುಳಿತಿದ್ದಾನೆ.

ಹತ್ತಿರ ಬಂದ ತಂಗಿ ಅಣ್ಣನ ಭುಜವನ್ನು ಮೃದುವಾಗಿ ಮುಟ್ಟಿ 'ಅಣ್ಣಯ್ಯ' ಎನ್ನುತ್ತಾಳೆ. ಎಚ್ಚೆತ್ತ ಅವನು ತಂಗಿಯನ್ನು ತಬ್ಬಿಕೊಂಡು ಗಳಗಳನೆ ಅತ್ತುಬಿಡುತ್ತಾನೆ. ತನ್ನ ಎಡಗೈಯಲ್ಲಿ ತಂಗಿಯನ್ನು ತಬ್ಬಿ ಬಲಗೈಯಲ್ಲಿ ಡಬ್ಬಿಯನ್ನು ಹಿಡಿದು ಮನೆಯ ಹಿಂದಿನ ತೋಟಕ್ಕೆ ಬರುತ್ತಾನೆ. ಅಲ್ಲಿ ಒಂದು ಮರದ ಕೆಳಗೆ ಕುಳಿತು ಡಬ್ಬಿಯ ಮುಚ್ಚಳ ತೆಗೆದು ತಂಗಿಗೆ ತೋರಿಸುತ್ತಾನೆ. ನೋಡಿದ ಅವಳು ಏನೊಂದೂ ತಿಳಿಯದೆ ಅಣ್ಣನ ಕಣ್ಣುಗಳಲ್ಲಿ ಕಣ್ಣಿಟ್ಟು ದಿಟ್ಟಿಸುತ್ತಾಳೆ.

"ಇದು ಮಣ್ಣು"

......................

"ಬರಿಯ ಮಣ್ಣಲ್ಲ ರಕ್ತಸಿಕ್ತವಾದ ಮಣ್ಣು" ಎಂದು ಅದನ್ನು ತನ್ನ ಹಣೆಗೆ ಹಚ್ಚಿಕೊಳ್ಳುತ್ತಾನೆ. ಅದನ್ನು ತಂಗಿಯ ಹಣೆಗೂ ಹಚ್ಚುತ್ತಾನೆ. ಏಕೆಂದು ತಿಳಿಯದ ಆಕೆ "ಏನಣ್ಣಯ್ಯ ಇದು " ಎಂದು ಕೇಳುತ್ತಾಳೆ.

"ಇದು ಜಲಿಯನ್ ವಾಲಾಬಾಗ್‌ನ ಮಣ್ಣು" ಎಂದು ಕಣ್ಣು ಮುಚ್ಚಿ

ಧ್ಯಾನಾಸಕ್ತನಾಗುತ್ತಾನೆ. ಸ್ವಲ್ಪಹೊತ್ತಿನ ನಂತರ ತೆರೆದ ಅವನ ಕಣ್ಣುಗಳು ಕೆಂಡಮಂಡಲವಾಗಿವೆ, ಧೃಡತೆಯನ್ನು ಸೂಸುತ್ತಿವೆ. ದೂರದ ಒಂದು ಆಶಾಕಿರಣ ಅವುಗಳಲ್ಲಿ ಬೆಳಗುತ್ತಿದೆ. ನೆಟ್ಟಕಣ್ಣು ನೆಟ್ಟಂತೆಯೇ ಧೃಢವಾದ ಮಾತಿನಲ್ಲಿ ಪ್ರತಿಜ್ಞೆಮಾಡಿ ಹೇಳುತ್ತಾನೆ.

"ಅಮಾನುಷ ಬ್ರಿಟಿಷರ ಸರ್ವಾಧಿಕಾರವನ್ನು ಕಿತ್ತೊಗೆಯುವವರೆಗೆ ನಾನು ಹೋರಾಡುತ್ತೇನೆ." ಅವನ ಆ ನಿರ್ಧಾರದ ಮುಖಮಂಡಲದಲ್ಲಿ ಬೆಳಗುತ್ತಿದ್ದ ಪ್ರಕಾಶವನ್ನು ಕಂಡು ತಂಗಿ ಆನಂದ ಪುಳಕಿತಳಾಗಿದ್ದಾಳೆ.


'ಜಲಿಯನ್ ವಾಲಾಬಾಗ್' ಎನ್ನುವುದು ಏನು? 'ಆತ' ಯಾರು?

ಭಾರತ ಅನೇಕ ರಾಜ್ಯಗಳನ್ನು ಒಳಗೊಂಡಿದೆ. ಕರ್ನಾಟಕದಂತೆ ಪಂಜಾಬ್ ಕೂಡ ಒಂದು ರಾಜ್ಯ. ಅದು ಉತ್ತರ ಭಾರತದಲ್ಲಿದೆ. ಅಲ್ಲಿ ಸಿಖ್ಖರು ಹೆಚ್ಚಾಗಿದ್ದಾರೆ. ಸಿಖ್ಖರ ಪವಿತ್ರ ದೇವಾಲಯವನ್ನು 'ಸ್ವರ್ಣಮಂದಿರ' ಎಂದು ಕರೆಯುತ್ತಾರೆ. ಅದು ಅಮೃತಸರದಲ್ಲಿದೆ. ಜಲಿಯನ್ ವಾಲಾಬಾಗ್ ಎನ್ನುವುದು ಅಮೃತಸರದ ನಗರ ಪ್ರದೇಶದಲ್ಲಿರುವ ಒಂದು ಜಾಗ. ಸುತ್ತಲೂ ಕಟ್ಟಡವಿದ್ದು ಮಧ್ಯದಲ್ಲಿ ಒಂದು ವಿಶಾಲವಾದ ಮೈದಾನವಿದೆ. ಇದಕ್ಕೆ ಹೋಗಲು ಕಟ್ಟಡಗಳ ಮಧ್ಯದಲ್ಲಿ ಸುಮಾರು ಐದಡಿ ಅಗಲದ ದಾರಿಯನ್ನು ಬಿಟ್ಟರೆ ಬೇರೆ ದಾರಿ ಇಲ್ಲ.

ಆ ಕಾಲದಲ್ಲಿ ಸ್ವಾತಂತ್ರ್ಯ ಚಳುವಳಿ ಪ್ರಬಲಗೊಳ್ಳುತ್ತಿದ್ದ ಕಾರಣ ೧೯೧೯ರಲ್ಲಿ ನ್ಯಾಯಮೂರ್ತಿ ರೌಲತ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯ್ತು. ಆ ಸಮಿತಿಯ ಉದ್ದೇಶ ಚಳುವಳಿಯನ್ನು ಕುರಿತು ವರದಿ ಒಪ್ಪಿಸುವುದಾಗಿತ್ತು. ಆ ವರದಿಯ ಆಧಾರದ ಮೇಲೆ ಸಂಶಯಕ್ಕೆ ಒಳಗಾದ ವ್ಯಕ್ತಿಯನ್ನು ವಿಚಾರಣೆಗೆ ಗುರಿಪಡಿಸದೆ ಅನಿರ್ದಿಷ್ಟ ಕಾಲದವರೆಗೆ ಬಂಧಿಸುವ ಅಧಿಕಾರವನ್ನು ಆಡಳಿತಗಾರರಿಗೆ ಕೊಡಲಾಯ್ತು. ಈ ಅನ್ಯಾಯವನ್ನು ಪ್ರತಿಭಟಿಸಿ ಗಾಂಧೀಜಿ ಸತ್ಯಾಗ್ರಹ ಆರಂಭಿಸಿದರು. ಇಡೀ ಭಾರತ ಹರತಾಳವನ್ನು ಆಚರಿಸಿತು. ಪ್ರಚಂಡ ಯಶಸ್ಸನ್ನು ಪಡೆಯಿತು. ಇದನ್ನು ಸಹಿಸದ ಬ್ರಿಟಿಷ್ ಅಧಿಕಾರಿಗಳು ಚಳವಳಿ ನೇತಾರರಾದ ಗಾಂಧೀಜಿ, ಡಾ.ಸತ್ಯಪಾಲ ಹಾಗೂ ಡಾ. ಸಯಿಫುದ್ದೀನ್ ಕಿಚ್‌ಲ್ಯೂ ಅವರುಗಳನ್ನು ಬಂಧಿಸುವ ಆಜ್ಞೆ ಹೊರಡಿಸಿತು.

ಅಧಿಕಾರ ವಹಿಸಿಕೊಂಡ ಬ್ರಿಗೇಡಿಯರ್ ಜನರಲ್ ರೆಡಿನಾಲ್ಡ್ ಇ.ಎಚ್.ಡಯರ್ ಸಭೆಗಳಾಗಲೀ, ಮೆರವಣಿಗೆಗಳಾಗಲೀ ನಡೆಯಬಾರದೆಂಬ ಆಜ್ಞೆಯನ್ನು ಜಾರಿಗೊಳಿಸಿದ. ಇದನ್ನು ಪ್ರತಿಭಟಿಸಿ ೧೯೧೯ ಏಪ್ರಿಲ್ ೧೩ರಂದು ಜಲಿಯನ್ ವಾಲಾಬಾಗ್‌ನಲ್ಲಿ ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಯ್ತು. ಎಲ್ಲ ಮತದ ಸುಮಾರು ಇಪ್ಪತ್ತು ಸಾವಿರ ಜನರು ಸೇರಿದರು. ಮಹಾತ್ಮ ಹಂಸರಾಜ್ ಅಂದಿನ ಪ್ರಮುಖ ಭಾಷಣಕಾರರಾಗಿದ್ದರು. ಸಭೆ ಪ್ರಾರಂಭವಾದ ಸ್ವಲ್ಪ ಹೊತ್ತಿನಲ್ಲೇ ದ್ವಾರದ ಬಳಿ ಸೈನಿಕರನ್ನು ನಿಲ್ಲಿಸಿ ಗುಂಡುಹಾರಿಸಲು ಡಯರ್ ಆದೇಶವಿತ್ತ. ಹತ್ತು ನಿಮಿಷಗಳ ಕಾಲ ಗುಂಡಿನ ಸುರಿಮಳೆಯಾಯ್ತು. ೧೬೫೦ ಸುತ್ತು ಗುಂಡುಗಳನ್ನು ಹಾರಿಸಲಾಯ್ತು. ೩೭೯ ಜನ ಸತ್ತು ೧೫೧೬ ಜನ ಗಾಯಗೊಂಡರು.

ಸ್ತ್ರೀ ಪುರುಷರ ರಕ್ತಸಿಕ್ತ ಹೆಣಗಳು ರಾಶಿರಾಶಿ ಬಿತ್ತು, ಚಿಕ್ಕ ಕಂದಮ್ಮಗಳನ್ನು ಎದೆಗವಚಿಕೊಂಡ ತಾಯಂದಿರು ಮಕ್ಕಳ ಸಮೇತ ಅಸುನೀಗಿದ್ದರು. ಜಲಿಯನ್ ವಾಲಾಬಾಗ್‌ನ ಮಣ್ಣು ರಕ್ತದಿಂದ ಕೆಂಪಾಯ್ತು. ಆ ಕೆಂಪುರಕ್ತದಿಂದ ತೊಯ್ದಮಣ್ಣನ್ನೆ ಘಟನೆ ನಡೆದ ಒಂದು ವಾರದ ನಂತರ ಆ ಹನ್ನೆರಡು ವರ್ಷದ ಬಾಲಕ ತಂದಿದ್ದು. ಆ ಘಟನೆ ಬಾಲಕನ ಹೃದಯದಲ್ಲಿ ಸುಪ್ತವಾಗಿದ್ದ ಸ್ವಾತಂತ್ರ್ಯದ ಕೆಚ್ಚನ್ನು ಎಚ್ಚರಿಸಿತ್ತು. ಆ ಬಾಲಕ ಮತ್ತಾರೂ ಅಲ್ಲ. ಆತನೇ ಭಾರತದ ಸ್ವಾತಂತ್ರ್ಯಕ್ಕಾಗಿ ನಗುನಗುತ ನೇಣುಗಂಬವನ್ನೇರಿದ 'ಮರೆಯಲಾಗದ ಭಗತ್ ಸಿಂಗ್'.



ಜಲಿಯನ್ ವಾಲಾ ಬಾಗ್

ಭಗತ್ ಸಿಂಗ್ ಹುಟ್ಟಿದ್ದು ೧೯೦೭ರ ಸೆಪ್ಟೆಂಬರ್ ೨೭ರಂದು ಪಂಜಾಬಿನ ಲಾಯಲ್‌ಪುರ್ ಜಿಲ್ಲೆಯ ಜರನ್‌ವಾಲಾ ತಾಲ್ಲೂಕಿನ 'ಬಂಗಾ' ಗ್ರಾಮದಲ್ಲಿ. ತಂದೆ ಕಿಶನ್‌ಸಿಂಗ್,ತಾಯಿ ವಿದ್ಯಾವತಿ. ಆತನ ಪ್ರಾಥಮಿಕ ವಿದ್ಯಾಭ್ಯಾಸ ಹುಟ್ಟೂರಿನಲ್ಲಿಯೇ ಆಯಿತು. ತಂದೆ ತಾಯಿಯ ಆದರ್ಶ ಜೀವನ, ಚಿಕ್ಕಪ್ಪಂದಿರ ಧೈರ್ಯ ಸಾಹಸಗಳು ಬಾಲಕ ಭಗತ್‌ನ ಮೇಲೆ ಅಪಾರ ಪರಿಣಾಮ ಬೀರಿದವು.

ಆರಂಭದ ವಿದ್ಯಾಭ್ಯಾಸ ಮುಗಿಸಿದ ಭಗತ್ ಹೆಚ್ಚಿನ ವ್ಯಾಸಂಗಕ್ಕಾಗಿ ಲಾಹೋರಿನ ಡಿಎವಿ ಕಾಲೇಜಿಗೆ ಸೇರಿಕೊಂಡ. ೧೯೨೦ರ ಅಸಹಕಾರ ಚಳುವಳಿಯ ಕರೆಯಂತೆ ಸರ್ಕಾರದ ವತಿಯಿಂದ ನಡೆಯುತ್ತಿದ್ದ ಡಿಎವಿ ಕಾಲೇಜನ್ನು ತೊರೆದು ನ್ಯಾಷನಲ್ ಕಾಲೇಜು ಸೇರಿಕೊಂಡ. ಅಲ್ಲಿ ಜಯಚಂದ್ರ ವಿದ್ಯಾಲಂಕಾರ್ ಭಗವತೀ ಚರಣ್, ಸುಖದೇವ್ ಮೊದಲಾದವರ ಸಂಪರ್ಕ ದೊರೆಯಿತು. ಅವರ ವಿಚಾರಗಳಿಂದ ಭಗತ್‌ನ ವ್ಯಕ್ತಿತ್ವ ರೂಪುಗೊಳ್ಳತೊಡಗಿತು. ಎಲ್ಲರೂ ಒಟ್ಟಿಗೆ ಪಂಜಾಬ್ ಕಾಂಗ್ರೆಸ್ಸಿನ ನೀತಿಯ ಬಗ್ಗೆ, ಸರ್ಕಾರದ ಅಂದಿನ ಆಗುಹೋಗುಗಳ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆಸುತ್ತಿದ್ದರು. ಭಗತ್‌ನಲ್ಲಿ ಹೋರಾಟದ ಮನೋಧರ್ಮ ಸ್ಪಷ್ಟ ರೂಪ ಪಡೆಯುತ್ತಿತ್ತು. ಜೊತೆ ಜೊತೆಗೆ ಅಂತರಂಗದ ಒಳಚಿಂತನೆಯಿಂದಾಗಿ ಸಾಮಾಜಿಕ ಜೀವನದಲ್ಲಿ ನಡೆಯುತ್ತಿದ್ದ ಅನ್ಯಾಯಗಳು ಕಣ್ಣ ಮುಂದೆ ಕಟ್ಟಿದವು. ದೇವರು ಧರ್ಮದ ಹೆಸರಿನಲ್ಲಿ ಪುರೋಹಿತಶಾಹಿ ಬಹುಸಂಖ್ಯಾತ ಶೂದ್ರರನ್ನು, ಅಂತ್ಯಜರನ್ನು ಗುಲಾಮರಿಗಿಂತ ಕಡೆಯಾಗಿ ಕಂಡು ವಿದ್ಯೆಯಿಂದ ವಂಚಿತರನ್ನಾಗಿಸಿ ಸಾಮಾಜಿಕ ಮನ್ನಣೆಯನ್ನು ನೀಡದೆ ಪಶುಗಳಿಗಿಂತ ಕಡೆಯಾಗಿ ಕಾಣುತ್ತಿದ್ದ ಕಾರಣಗಳು ಸ್ಪಷ್ಟವಾಗಿ ಗೋಚರಿಸಿದವು. ಮೇಲೆ ಧರ್ಮವನ್ನು ಬೋಧಿಸಿದರೂ ಅಂತರಂಗ ಸ್ವಾರ್ಥ ಸುಲಿಗೆಗಳ ತಾಣವಾಗಿತ್ತು. ಇದನ್ನು ಕಂಡುಕೊಂಡ ಭಗತ್‌ಗೆ ಸ್ವಾತಂತ್ರ್ಯದ ಹೋರಾಟ ಒಂದು ಕಡೆಯಾದರೆ ಈ ಸಾಮಾಜಿಕ ಸಂಕೋಲೆಗಳಿಂದ ಮುಗ್ಧ ಜನರನ್ನು ಬಿಡುಗಡೆ ಮಾಡುವ ಜವಾಬ್ದಾರಿಯುತ ಚಿಂತನೆ ಮತ್ತೊಂದು ಕಡೆ. ಈ ಎರಡನ್ನು ಸಾಧಿಸಲು ಭಗತ್‌ನ ಹೃದಯ ಸಾಧನ ರಂಗವಾಗಿತ್ತು. ಅವನ ಮನಸ್ಸು ಹಗಲಿರುಳು ಅದನ್ನೇ ಕುರಿತು ಚಿಂತಿಸುತ್ತಿತ್ತು.

ಭಗತ್‌ನ ಚಿಂತನೆ ಇದಾದರೆ ಆತನ ಅಜ್ಜಿಯ ಚಿಂತನೆ ಬೇರೆಯದೇ ಆಗಿತ್ತು. ಭಗತ್‌ನಿಗೆ ಮದುವೆ ಮಾಡಬೇಕೆಂಬುದು ಆಕೆಯ ಆಸೆ. ಅದಕ್ಕಾಗಿ ಭಗತ್‌ನ ಮೇಲೆ ಹೆಚ್ಚು ಒತ್ತಡ ತರಲಾಯಿತು. ಆದರೆ ಭಗತ್‌ಗೆ ಮದುವೆಯಲ್ಲಿ ಕಿಂಚಿತ್ತು ಆಸೆಯಾಗಲೀ, ಆಸಕ್ತಿಯಾಗಲೀ ಇರಲಿಲ್ಲ. ಲಾಹೋರಿನಲ್ಲಿಯೇ ಇದ್ದರೆ ಮತ್ತೆಲ್ಲಿ ಒತ್ತಡ ತರುತ್ತಾರೋ ಎಂದು ಭಾವಿಸಿ ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸಿ ಯಾರಿಗೂ ತಿಳಿಸದೆ ಕಾನ್ಪುರಕ್ಕೆ ತೆರಳಿದ. ದೇಶದ ಸ್ವಾತಂತ್ರ್ಯದ ಬಗ್ಗೆ ಆತನಿಗಿರುವ ತೀವ್ರ ತುಡಿತ, ಕಾಳಜಿ ಎಷ್ಟರಮಟ್ಟಿನದು ಎಂಬುದು ಆತನ ಈ ಮಾತುಗಳಲ್ಲಿ ಮನವರಿಕೆಯಾಗುತ್ತದೆ.

"ನನ್ನ ಮದುವೆಯೆಂಬುದು ದಾಸ್ಯದ ತೊಳಲಾಟದಲ್ಲಿರುವ ಭಾರತದಲ್ಲಿ ನಡೆಯುವುದಾದರೆ, ಅದು ನನ್ನ ಸಾವೆಂಬ ಪತ್ನಿಯೊಡನೆ ಮಾತ್ರ. ನನ್ನ ಮದುವೆಯ ಮೆರವಣಿಗೆ ಶವಯಾತ್ರೆಯಿದ್ದಂತೆಯೇ. ಆ ಮೆರವಣಿಗೆಯಲ್ಲಿ ದೇಶಕ್ಕೆ ತ್ಯಾಗ ಮಾಡಿದ ಹುತಾತ್ಮರಿರುತ್ತಾರೆ." ಮದುವೆಯಾಗಿ ಸುಖದಾಂಪತ್ಯ ನಡೆಸುವುದು ಆತನಿಗೆ ಬೇಕಿರಲಿಲ್ಲ, ಭಾವನೆಗಳು, ವಿಚಾರಗಳು, ಯಾವಾಗಲೂ ಸ್ವತಂತ್ರವಾಗಿರಬೇಕೆಂದು ಆತ ಬಯಸಿದ್ದ.

ಕಾನ್ಪುರಕ್ಕೆ ಬಂದ ತಕ್ಷಣ ಭಗತ್‌ಸಿಂಗ್ ಅಲ್ಲಿನ ಪ್ರತಿಭಾವಂತ ಕ್ರಾಂತಿಕಾರಿ ಗಣೇಶ್ ಶಂಕರ್ ವಿದ್ಯಾರ್ಥಿಯವರನ್ನು ಭೇಟಿ ಮಾಡಿ, ಅವರು ನಡೆಸುತ್ತಿದ್ದ ಪ್ರತಾಪ್ ಪ್ರೆಸ್‌ನಲ್ಲಿ ಬಾತ್ಮೀದಾರನಾಗಿ ಸೇರಿಕೊಂಡ. ಅವನ ದೇಶಪ್ರೇಮವನ್ನು ಕಂಡ ಗಣೇಶ್ ಶಂಕರ್‌ರವರು "ದೇಶ ಸೇವೆಯೆಂದರೆ,



ರಕ್ತ ಸಿಕ್ತವಾದ ಮಣ್ಣಿನ ಕುಡಿಕೆ

ದೇಶಪ್ರೇಮಿಯಾಗುವುದೆಂದರೆ ಮನೋಹರವೂ, ಮೋಹಕವೂ ಆದ ಪತಂಗವೊಂದು ಜ್ವಾಲೆಯನ್ನು ಬಯಸಿ ಬಳಿ ಸಾರಿದಂತೆಯೇ" ಎಂದು ಮಾರ್ಮಿಕವಾಗಿ ನುಡಿದರು. ಅಚಲ ದೇಶಪ್ರೇಮಿ ಭಗತ್‌ನ ಉತ್ತರ ಇದಕ್ಕೆ ಸಿದ್ಧವಾಗಿಯೇ ಇತ್ತು. "ದೇಶದ ವಿಮುಕ್ತಿಗಾಗಿ ಏನಾದರೂ ಮಾಡಲು ಇಲ್ಲವೇ ಮಡಿಯಲು ನಿರ್ಧರಿಸಿಯೇ ಬಂದಿದ್ದೇನೆ. ತಾವು ಈಗಾಗಲೇ ಈ ನಿಟ್ಟಿನಲ್ಲಿ ಸಾಕಷ್ಟು ಅನುಭವಿಗಳು. ತಮ್ಮ ಮಾರ್ಗದರ್ಶನ ನನಗೆ ಅಗತ್ಯವಿದೆ. ನನ್ನನ್ನು ನೀವು ಪತಂಗವೆಂದು ಬಗೆದರೆ, ನಾನು ಜ್ವಾಲೆಯಲ್ಲಿ ಸರಸವಾಡಲು ಮುಗುಳ್ನಗೆಯಿಂದಲೇ ಮುಂದಾಗುತ್ತೇನೆ" ಎಂದು ಹೇಳಿದ. ಅಂದಿನಿಂದ, ಗಣೇಶ್ ಶಂಕರ್ ಹಾಗೂ ಭಗತ್‌ನ ಆದರ್ಶಗಳು, ಧ್ಯೇಯಗಳು, ಭಾವನೆಗಳು, ವಿಚಾರಗಳೆಲ್ಲವೂ ಒಂದಾಗತೊಡಗಿದವು. ಗಣೇಶ್ ಶಂಕರ್‌ರವರಿಂದ ಭಗತ್‌ಗೆ ಬಿ.ಕೆ. ದತ್, ಜೆ.ಸಿ. ಚಟರ್ಜಿ, ಚಂದ್ರಶೇಖರ್ ಆಜಾದ್ ಹೀಗೆ ಇನ್ನಿತರ ವಿಶಿಷ್ಟ ವ್ಯಕ್ತಿಗಳ ಗೆಳೆತನ ದೊರೆಯಿತು.

ಇತ್ತ ಮನೆಯಲ್ಲಿ, ಭಗತ್‌ನ ಕೊರಗಿನಲ್ಲಿ ಅಜ್ಜಿಯ ಆರೋಗ್ಯ ಹದಗೆಡಲಾರಂಭಿಸಿತು. ಕಿಶನ್‌ಸಿಂಗ್ ಭಗತ್‌ಗಾಗಿ ಬಹಳ ಹುಡುಕಿ ಕಡೆಗೆ ಆತ ಕಾನ್ಪುರದಲ್ಲಿರುವ ವಿಚಾರ ತಿಳಿಯಿತು. ತಿರುಗಿ ಬರಬೇಕೆಂದು ಆತನನ್ನು ಬಹುವಾಗಿ ಕೇಳಿಕೊಂಡರು. ಮತ್ತೆ ಮದುವೆಯ ಭಾರವನ್ನು ತನ್ನ ಮೇಲೆ ಹೇರುವುದಿಲ್ಲವೆಂದು ತಂದೆಯಿಂದ ಪ್ರಮಾಣ ಮಾಡಿಸಿಕೊಂಡು ೧೯೨೫ರಲ್ಲಿ ಭಗತ್ ಲಾಹೋರಿಗೆ ಹಿಂದಿರುಗಿ ಬಂದ.

೧೯೨೬ರಲ್ಲಿ ಭಗತ್ ಸಿಂಗ್ ಲಾಹೋರಿನಲ್ಲಿ ಹಲವಾರು ದೇಶಪ್ರೇಮಿ ಯುವಕರನ್ನೂ, ಕಚೇರಿಯ ವಿದ್ಯಾರ್ಥಿಗಳನ್ನು ಸಂಘಟಿಸಿ, "ನೌಜವಾನ್ ಭಾರತ ಸಭಾ" ಎಂಬ ಸಂಘವನ್ನು ಕಟ್ಟಿ ಅದರ ಕಾರ್ಯದರ್ಶಿಯಾಗಿ ಕಾರ್ಯನಿರತನಾದ. "ನೌಜವಾನ್ ಭಾರತ ಸಭಾ"ದ ಕೆಲವು ಧ್ಯೇಯೋದ್ದೇಶಗಳನ್ನು ಇಲ್ಲಿ ಉಲ್ಲೇಖಿಸುವ ಅಗತ್ಯವಿದೆ. ಏಕೆಂದರೆ, ಅದರ ಬಹಳಷ್ಟು ಉದ್ದೇಶಗಳು ಭಗತ್‌ಸಿಂಗ್‌ನ ಸಿದ್ಧಾಂತವನ್ನೇ ಒಳಗೊಂಡಿದ್ದವು.

೧. ಭಾವೈಕ್ಯ ಭಾರತದ ನಿರ್ಮಾಣಕ್ಕಾಗಿ ಯುವಕರಲ್ಲಿ ದೇಶಾಭಿಮಾನ ಮೂಡಿಸುವುದು.


೨. ಶ್ರಮಿಕರು(ಕಾರ್ಮಿಕರು) ಹಾಗೂ ರೈತರನ್ನು ಸಂಘಟಿಸುವುದು ಹಾಗೂ ಶ್ರಮಿಕ ವರ್ಗದಿಂದಲೇ ಸ್ವತಂತ್ರ ಗಣರಾಜ್ಯವನ್ನು ಸ್ಥಾಪಿಸುವುದು.

೩. ಸ್ವತಂತ್ರ ಗಣರಾಜ್ಯ ಸ್ಥಾಪನೆಯ ಹಿನ್ನೆಲೆಯಲ್ಲಿ ಜರುಗುವ ಸಾಮಾಜಿಕ, ಆರ್ಥಿಕ ಹಾಗೂ ಔದ್ಯೋಗಿಕ ಚಳುವಳಿಗಳನ್ನು ಬೆಂಬಲಿಸುವುದು.

೪. ಭಾರತದ ಗಣರಾಜ್ಯವನ್ನು ರಾಷ್ಟ್ರದ ರೈತರು ಹಾಗೂ ಶ್ರಮಿಕರಿಂದಲೇ ರಚಿಸುವುದು.

ಈ ಉನ್ನತ ಧ್ಯೇಯಗಳನ್ನು ಹೊತ್ತ ಸಂಘದ ಸದಸ್ಯರೆಲ್ಲ ರಷ್ಯಾದ ೧೯೧೭ರ ಸಮಾಜವಾದಿ ಕ್ರಾಂತಿಯಿಂದ ಪ್ರಭಾವಿತರಾಗಿದ್ದರೆನ್ನುವುದು ಮುಖ್ಯವಾದ ವಿಷಯ. ಈ ಧ್ಯೇಯಗಳಿಗೆ ನಾಡಿನ ಎಲ್ಲಾ ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರರು ಸ್ನೇಹ ಹಸ್ತವನ್ನು ನೀಡಿದರು. ಆದರೆ ೧೯೩೦ರ ಮೇ ೩೦ರಂದು ಈ ಸಂಘಟನೆ ಒಂದು ಕಾನೂನುಬಾಹಿರ ಸಂಘಟನೆಯೆಂದು ಸರ್ಕಾರದಿಂದ ಘೋಷಿಸಲ್ಪಟ್ಟಿತು. ಆದರೆ, ಸಮಯಕ್ಕೆ ತಕ್ಕಂತೆ ಆಗಾಗ್ಗೆ ತನ್ನ ಹೆಸರನ್ನು ಆ ಸಂಸ್ಥೆ ಬದಲಿಸಿಕೊಳ್ಳುತ್ತ ಹೊಸ ಹಾದಿಯತ್ತ ಹೆಜ್ಜೆಯಿಡಲಾರಂಭಿಸಿತು.

೧೯೨೭ರ ಅಕ್ಟೋಬರ್‌ನಲ್ಲಿ ಲಾಹೋರಿನಲ್ಲಿ ನಡೆಯುತ್ತಿದ್ದ ಧಾರ್ಮಿಕ ಉತ್ಸವವೊಂದರಲ್ಲಿ ಭಗತ್ ಪಾಲ್ಗೊಂಡಿದ್ದ. ಅಲ್ಲಿ ಹಠಾತ್ತನೆ ಯಾರೋ ಬಾಂಬ್‌ಗಳನ್ನು ಸಿಡಿಸಿದರು. ಅದರಿಂದಾಗಿ ಕೆಲವರು ಮರಣ ಹೊಂದಿದರು ಮತ್ತೆ ಕೆಲವರು ಗಂಭೀರವಾಗಿ ಗಾಯಗೊಂಡರು. ಭಗತ್‌ಸಿಂಗ್ ಆ ಉತ್ಸವದಲ್ಲಿ ಪಾಲ್ಗೊಂಡಿದ್ದನೆಂದು ಒಂದೇ ಕಾರಣಕ್ಕೆ ಅಂದು ಆತನ ದಸ್ತಗಿರಿಯಾಯಿತು. ತಾನು



ಪಾರ್ಲಿಮೆಂಟಿನಲ್ಲಿ ಬಾಂಬ್ ಸ್ಫೋಟ

ಅಂದು ಬಂಧಿಯಾಗಬಹುದೆಂದು ಆತ ಯೋಚಿಸಿಯೂ ಇರಲಿಲ್ಲ, ಜೀವನದಲ್ಲಿ ಪ್ರಥಮ ಬಾರಿಗೆ ಭಗತ್ ಜೈಲು ಪ್ರವೇಶಿಸಿದ. ಆತನ ಕ್ರಾಂತಿಕಾರಿ ಚಟುವಟಿಕೆಗಳ ಮೇಲೆ ಕಣ್ಣಿಟ್ಟಿದ್ದ ಬ್ರಿಟಿಷ್ ಸರಕಾರ ಆತನ ವಿರುದ್ಧ ಸುಳ್ಳು ಸಾಕ್ಷಿಗಳ ಸರಮಾಲೆಯನ್ನೇ ಸೃಷ್ಟಿಸಿತು. ಕಡೆಗೆ ಅರವತ್ತು ಸಾವಿರ ರೂಪಾಯಿಗಳ ಜಾಮೀನಿನ ಮೇಲೆ ಆತನನ್ನು ಬಿಡುಗಡೆ ಮಾಡಲಾಯಿತು.

ಸೈಮನ್ ಕಮೀಷನ್ ವಿರುದ್ಧ ದೇಶದೆಲ್ಲೆಡೆ ವಿರೋಧಗಳು ವ್ಯಕ್ತಗೊಳ್ಳತೊಡಗಿದವು. ೧೯೨೮ರ ಅಕ್ಟೋಬರ್ ೩೦ರಂದು ಲಾಹೋರಿನ ವೀಕ್ಷಣೆಗಾಗಿ ಬಂದ ಸಾವಿರಾರು ಜನರು ಕಮೀಷನ್‌ನ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಿದರು. ಲಾಲಾ ಲಜಪತರಾಯ್, ಪಂಡಿತ ಮದನ ಮೋಹನ ಮಾಳವಿಯ, ಭಗತ್ ಈ ಪ್ರತಿಭಟನೆಯ ಮುಂಚೂಣಿಯಲ್ಲಿದ್ದರು. ಆಗ ಲಾಹೋರಿನ ಪೋಲೀಸ್ ಮುಖ್ಯಾಧಿಕಾರಿಯಾಗಿದ್ದವನು ಸ್ಕಾಟ್. ಆತ ಆಯೋಗದ ವಿರುದ್ಧ ನಡೆಯಲಿದ್ದ ಮೆರವಣಿಗೆಯನ್ನು ಕಡ್ಡಾಯವಾಗಿ ನಿಷೇಧಿಸಿದ್ದ. ಆತನ ನಿಷೇಧವನ್ನು ಲೆಕ್ಕಿಸದೆ ಜನರು ಒಂದೇ ಸಮನೆ ನುಗ್ಗಲಾರಂಭಿಸಿದರು. ಲಾಠಿ ಪ್ರಹಾರ ಪ್ರಾರಂಭವಾಯಿತು. ಯಾವುದಕ್ಕೂ ದೃತಿಗೆಡದೆ ಎದೆಕೊಟ್ಟು ನಿಂತಿದ್ದ ಲಾಲಾ ಲಜಪತರಾಯರ ಮೇಲೆ ಸ್ಕಾಟ್ ಸ್ವತಃ ತಾನೇ ಲಾಠಿ ಪ್ರಹಾರ ಮಾಡಿಬಿಟ್ಟ. ರಾಯರ ತಲೆಗೆ ಭೀಕರವಾದ ಪೆಟ್ಟು ಬಿದ್ದು ತೀವ್ರ ರಕ್ತಸ್ರಾವವಾಯಿತು. ೧೯೨೮ರ ನವೆಂಬರ್ ೧೭ರಂದು ಅವರು ಕಡೆಯ ಉಸಿರೆಳೆದರು.

ಲಾಲಾ ಲಜಪತರಾಯರ ಸಾವಿನ ಸುದ್ದಿ ನಾಡಿನೆಲ್ಲ ಕ್ರಾಂತಿಕಾರಿಗಳ ಆಕ್ರೋಶದ ಗಾಯಕ್ಕೆ ಉಪ್ಪು ಸವರಿದಂತಾಯಿತು. ಅವರನ್ನು ಕೊಂದ ಸ್ಕಾಟ್‌ನ ಕೊಲೆಗೈಯುವುದಾಗಿ ೧೯೨೮ರ ಡಿಸೆಂಬರ್ ೧೭ರ ದಿನವನ್ನು ಭಗತ್ ಗೊತ್ತು ಮಾಡಿದ. ಈ ಯೋಜನೆಯಲ್ಲಿ ಆತನ ಸ್ನೇಹಿತರೆಲ್ಲ ಒಂದೊಂದು ಕಾರ್ಯವಹಿಸಿಕೊಂಡರು. ಗೊತ್ತುಪಡಿಸಿದ ದಿನಕ್ಕಿಂತ ಒಂದು ವಾರ ಮುಂಚಿತವಾಗಿ ಸ್ಕಾಟ್‌ನ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸಿ ಆ ದಿನದಂದು ಸ್ಕಾಟ್ ಕಛೇರಿಯಿಂದ ಹೊರಬಂದೊಡನೆ ಹಸಿರು ಬಾವುಟ ತೋರಿಸಿ ಸೂಚನೆ ನೀಡುವುದು ಜಯಗೋಪಾಲನ ಕೆಲಸವಾಯಿತು. ಭಗತ್ ಹಾಗೂ ರಾಜಗುರು ಗುಂಡು ಹಾರಿಸುವುದು ಆಜಾದ್ ಹಾಗೂ ಸುಖದೇವ್ ಅವರಿಬ್ಬರ ರಕ್ಷಣೆಗಿರುವುದು ಎಂದು ತೀರ್ಮಾನವಾಯಿತು.

ನಿಗದಿಪಡಿಸಿದ ದಿನ ಸಂಜೆ ಸ್ಕಾಟ್‌ನ ಕಛೇರಿಯ ಸುತ್ತ ಭಗತ್ ಮತ್ತು ಸಂಗಡಿಗರು ಒಂದಾದರು. ಎಲ್ಲರೂ ಅವರವರಿಗೆ ಗೊತ್ತುಪಡಿಸಿದ್ದ ಕಾರ್ಯವನ್ನು ಸಾಧಿಸಲು ಅನುಕೂಲವಾದ ಸ್ಥಳದಲ್ಲಿ ಅಡಗಿ ಕುಳಿತರು. ಸ್ವಲ್ಪ ಹೊತ್ತಿನ ನಂತರ ಕಛೇರಿಯಿಂದ ಒಬ್ಬ ಅಧಿಕಾರಿ ಹೊರಬಂದ. ಜಯಗೋಪಾಲ್ ಹಸಿರು ನಿಶಾನೆ ತೋರಿಸಿದ. ತಕ್ಷಣವೇ ಭಗತ್ ಹಾಗೂ ರಾಜಗುರು ಆತನ ಕುತ್ತಿಗೆಗೆ ಗುಂಡು ಹಾರಿಸಿದರು. ಪುನಃ ಭಗತ್ ಆತ ಸತ್ತಿದ್ದಾನೋ ಇಲ್ಲವೋ ಎಂದು ಖಚಿತಪಡಿಸಿಕೊಳ್ಳಲು ಮತ್ತೆರಡು ಗುಂಡು ಹಾರಿಸಿದ. ದುರದೃಷ್ಟಕ್ಕೆ ಸತ್ತಿದ್ದವ ಸ್ಕಾಟ್ ಆಗಿರದೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಪೋಲೀಸ್ ಸಾಂಡರ್ಸ್ ಆಗಿದ್ದ. ಆತ ವೃತ್ತಿಗೆ ಹೊಸಬನಾದವ. ಭಗತ್‌ಸಿಂಗ್‌ನ ಗುಂಪನ್ನು ಪೋಲೀಸರು ಹಿಂಬಾಲಿಸಿದರು. ಆದರೆ, ಅವರೆಲ್ಲ ಅಲ್ಲಿಂದ ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಡಿಎವಿ ಕಾಲೇಜಿನಲ್ಲಿ ವೇಶ ಬದಲಿಸಿಕೊಂಡು ಭಗತ್ ಇಂದು ರಾತ್ರಿ ಅತ್ತಿಗೆ ದುರ್ಗಾದೇವಿಯ ಸಹಾಯದಿಂದ ಲಾಹೋರ್ ಬಿಟ್ಟು ಕಲ್ಕತ್ತಾಗೆ ಪ್ರಯಾಣ ಬೆಳೆಸಿದ. ದುರ್ಗಾದೇವಿ ಒಬ್ಬ ಧೀರ ಮಹಿಳೆ. ಈಕೆ ಭಗತ್‌ನ ಗೆಳೆಯ ಕ್ರಾಂತಿಕಾರಿ ನೇತಾರ ಭಗವತೀ ಚರಣ್‌ದಾಸ್‌ರ ಪತ್ನಿ.

ಭಗತ್‌ಸಿಂಗ್‌ನಿಗೆ ತಾನು ಮಾಡಬೇಕಾದ ಹಾಗೂ ತಾನು ಮಾಡುತ್ತಿರುವ ಕಾರ್ಯದ ಬಗ್ಗೆ ಸ್ಪಷ್ಟ

ನಿಲುವು ಹಾಗೂ ಕಲ್ಪನೆಯಿತ್ತು. ೧೯೨೮ರ ಆಗಸ್ಟ್ ಸೆಪ್ಟೆಂಬರ್‌ನಲ್ಲಿ ನೌಜವಾನ್ ಭಾರತ್ ಸಭಾದ ಸದಸ್ಯರನ್ನೆಲ್ಲಾ ಸೇರಿಸಿ ಆ ಸಂಘಟನೆ "ಹಿಂದೂಸ್ತಾನ್ ಸಮಾಜವಾದಿ ಗಣತಂತ್ರ ಸಂಘಟನೆ" ಎಂದು ಪುನರ್ ನಾಮಕರಣಗೊಂಡಿತು. ನೌಜವಾನ್ ಭಾರತ ಸಭಾದ ಕಾರ್ಯ ಚಟುವಟಿಕೆಗಳ ಮೇಲೆ ಸರ್ಕಾರದ ಕಣ್ಣಿದ್ದದ್ದು ಈ ಕಾರ್ಯಕ್ಕೆ ದಾರಿ ಮಾಡಿಕೊಟ್ಟಿತ್ತು. ತನ್ನ ಜೀವಿತ ಅವಧಿಯಲ್ಲಿ ಹಲವಾರು ಉನ್ನತ ಧ್ಯೇಯಗಳನ್ನು ರೂಪಿಸಿಕೊಂಡು ಅದರತ್ತ ದುಡಿಯುವಲ್ಲಿ ಈ ಸಂಸ್ಥೆ ಸಫಲವಾಯಿತು.

ಜಲಿಯನ್ ವಾಲಾ ಬಾಗ್ ಹತ್ಯಾಕಾಂಡ ಭಗತ್‌ನ ಆಲೋಚನೆಗಳನ್ನು ಬದಲಿಸಿದರೆ, ಲಾಲಾ ಲಜಪತರಾಯರ ಕೊಲೆ ಹಾಗೂ ಕಾರ್ಮಿಕ ವಿವಾದ ಕಾಯಿದೆ ಆತನ ಜೀವನದ ಗತಿಯನ್ನೇ ಬದಲಿಸಿದ ಎರಡು ಪ್ರಮುಖ ಘಟನೆಗಳು. ಸಾಂಡರ್ಸ್‌ನ ಹತ್ಯೆಯಲ್ಲಿ ಭಗತ್, ರಾಜಗುರು ಹಾಗೂ ಸುಖದೇವರು ಸರಕಾರಕ್ಕೆ ನುಂಗಲಾರದ ತುತ್ತಾಗಿದ್ದರು. ಬ್ರಿಟಿಷರ ತಕ್ಕಿನ ನೀತಿಗೆ ಕಾರ್ಮಿಕ ವಿವಾದ ಕಾಯಿದೆ ಒಂದು ಉದಾಹರಣೆಯಾಗಿತ್ತು. ಆ ಮೂವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಸೂಕ್ತ ನೆಲೆ ಒದಗಿಸಿದಂತಿತ್ತು. ೧೯೨೯ರ ಏಪ್ರಿಲ್ ೮ರಂದು ಶಾಸನಸಭೆಯಲ್ಲಿ ಶ್ರಮಿಕ ವರ್ಗಕ್ಕೆ ಬಿಡಿಸಲಾರದ ಉರುಳನ್ನು ಕಾರ್ಮಿಕ ವಿವಾದ ಕಾಯಿದೆಯ ಮೂಲಕ ಮಂಡಿಸಿ ನಿರ್ಧರಿಸಲು ಸರ್ಕಾರ ಯೋಜಿಸಿತ್ತು. ಭಗತ್ ಹಿಂದೂಸ್ತಾನ್ ಸಮಾಜವಾದಿ ಗಣತಂತ್ರ ಸಂಘಟನೆಯ ತುರ್ತು ಸಭೆ ಕರೆದು, ಸರ್ಕಾರದ ಮಂಡನೆಯನ್ನು ತಡೆಯಲು ಏನೆಲ್ಲಾ ಮಾಡಬಹುದೆಂದು ಚರ್ಚಿಸಿದ. ಆತನ ಪ್ರಕಾರ "ಬ್ರಿಟಿಷ್ ಅರಸರ ಆಡಳಿತದಲ್ಲಿ ನ್ಯಾಯವೆಂಬುದಕ್ಕೆ ಸ್ವಲ್ಪವೂ ಅವಕಾಶವಿಲ್ಲ. ಭಾರತೀಯರ ನಾಶವಾಗುತ್ತಿದೆ. ಭಾರತೀಯರಾದ ನಮಗೆ ನಿರಾಳವಾಗಿ ಉಸಿರಾಡಲೂ ಸಹ ಅವಕಾಶವಾಗದಂತೆ ನಮ್ಮನ್ನು ದಮನ ಮಾಡಿ ಹಿಂಸೆ, ದಬ್ಬಾಳಿಕೆಗಳೆಂಬ ಅಸ್ತ್ರಗಳ ಪ್ರಯೋಗ ಮಾಡಲಾಗುತ್ತಿದೆ. ಭಾರತವನ್ನು ಲೂಟಿ ಮಾಡುತ್ತಿರುವ ಈ ಸರ್ಕಾರ ನಮ್ಮನ್ನು ದಾಸ್ಯಕ್ಕೆ ತಳ್ಳಿದೆ. ನಾವು ಉಸಿರೆತ್ತಿದರೆ ಕೊಲ್ಲಲು ಹವಣಿಸುತ್ತಿದೆ. ತ್ಯಾಗ ಮತ್ತು ಬಲಿದಾನಗಳೇ ಇದಕ್ಕೆ ಪರಿಹಾರ ನೀಡಲು ಸಮರ್ಥವಾದವು. ಕೇಂದ್ರ ಶಾಸನ ಸಭೆಯಲ್ಲಿ ಬ್ರಿಟಿಷ್ ಮತ್ತು ಭಾರತೀಯ ಸದಸ್ಯರುಗಳ ಕಣ್ತೆರೆಸುವ ಕಾರ್ಯ ನಮ್ಮಿಂದಾಗಬೇಕು. ಕಾಯ್ದೆಯನ್ನು ಮಂಡಿಸಿ ಮತಗಳ ಎಣಿಕೆಗೆ ಬಿಟ್ಟಾಗ ಶಾಸನಸಭೆಯಲ್ಲೇ ಬಾಂಬುಗಳು ಸಿಡಿಯಬೇಕು. ಜೊತೆ ಜೊತೆಗೇ "ಇಂಕ್ವಿಲಾಬ್ ಜಿಂದಾಬಾದ್" ಎಂಬ ಕೂಗು ಎಲ್ಲೆಲ್ಲೂ ಮೊಳಗಬೇಕು. ಬಿಳಿಯರಿಗೆ ಪಾಠ ಕಲಿಸಬೇಕು. ಭಾರತೀಯ ಯುವಶಕ್ತಿ ಜಾಗೃತಗೊಂಡಿದೆಯೆಂದು ಅವರು ಅರಿಯುವಂತಾಗಬೇಕು. ಕ್ರಾಂತಿಯ ಚಿಗುರು ಹೆಮ್ಮರವಾಗುವುದೆಂದು ತಿಳಿಸಿ ಹೇಳಬೇಕು. ಸರ್ಕಾರಕ್ಕೆ ಮುಯ್ಯಿಗೆ ಮುಯ್ಯಿ ನೀಡಲೇಬೇಕು" ಎನ್ನುವುದು ಅವರ ಸ್ಪಷ್ಟ ನಿಲುವಾಗಿತ್ತು.

ಬಾಂಬ್ ಸಿಡಿಸುವ ಕಾರ್ಯವನ್ನು ಬಿ.ಕೆ. ದತ್ ಹಾಗೂ ಭಗತ್ ಸಿಂಗ್ ವಹಿಸಿಕೊಂಡರು. ಬಾಬ್ ಸಿಡಿಸಿ ತಪ್ಪಿಸಿಕೊಳ್ಳಬೇಕೇ, ಬೇಡವೇ ಎಂಬ ಪ್ರಶ್ನೆಗೆ ಭಗತ್ ಹೇಳಿದ "ದೇಶದ ಯುವ ಶಕ್ತಿಗೆ ತಿಳಿಯುವಂತೆ ನಮ್ಮ ಸಂದೇಶಗಳನ್ನು ಸಾರಲು ನ್ಯಾಯಾಲಯ ಒಳ್ಳೆಯ ವೇದಿಕೆಯಾಗುತ್ತದೆ. ಆದ್ದರಿಂದ ನಾವು ಬಂಧನಕ್ಕೆ ಒಳಗಾಗಲೇಬೇಕು". ಈ ಮಾತುಗಳು ಭಗತ್‌ನ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಬಾಂಬ್ ಸಿಡಿಸುವ ಯೋಜನೆಗೆ ಪೂರ್ಣ ಸಹಕಾರ ನೀಡಿದವರು ಜಯದೇವ ಕಪೂರ್ ಹಾಗೂ ಕೇಂದ್ರ ಶಾಸನ ಸಭೆಯ ಭಾರತೀಯ ಪ್ರತಿನಿಧಿಯೊಬ್ಬರು. ಏಪ್ರಿಲ್ ೮ರಂದು ಭಗತ್ ಮತ್ತು ಬಿ.ಕೆ.ದತ್‌ರವರು ಪ್ರೇಕ್ಷಕರ ಗ್ಯಾಲರಿಗೆ ಮಾರುವೇಷದಲ್ಲಿ ಬಂದು ಆಸೀನರಾದರು. ಯಾವುದೇ ಸದಸ್ಯರಿಗೂ ಅಥವಾ ಪ್ರೇಕ್ಷಕರಿಗೂ ಪೆಟ್ಟು ಬೀಳದಂತೆ ನೋಡಿಕೊಳ್ಳಬೇಕು ಎಂಬುದು

ಭಗತ್‌ನ ಎಣಿಕೆಯಾಗಿತ್ತು. ಅಸೆಂಬ್ಲಿ ತೀರ್ಮಾನವನ್ನು ಪ್ರಕಟಿಸಿದ ಸಭಾಪತಿ ವಿಠಲಬಾಯಿ ಪಟೇಲ್‌ರವರು ರೂಲಿಂಗ್ ಪ್ರಕಟಿಸುವ ಪ್ರಕ್ರಿಯೆಯ ಹಂತಕ್ಕೆ ಬಂದಾಗ ಎರಡು ಬಾಂಬ್‌ಗಳನ್ನು ಜನರಿಲ್ಲದ ಕಡೆಗೆ ಒಗೆದರು. ಇಡೀ ಸಭೆ ಕಂಗಾಲಾಗಿ ಹೋಯಿತು. ಶಾಸನ ಸಭಾಭವನ ದಟ್ಟ ಹೊಗೆಯಿಂದ ತುಂಬಿ ಹೋಯಿತು. ಇಬ್ಬರೂ ತಾವು ತಂದಿದ್ದ ಕರಪತ್ರಗಳನ್ನು ತೂರಿದರು. ಘೋಷಣೆಗಳನ್ನು ಕೂಗಿದರು. ಆ ಹೊಗೆಯಲ್ಲಿ ಇಬ್ಬರೂ ಪಾರಾಗಬಹುದಿತ್ತು. ಆದರೆ ಅವರು ಹಾಗೆ ಮಾಡದೆ ಸಂತೋಷವಾಗಿ ಪೋಲೀಸರ ವಶಕ್ಕೊಳಗಾದರು.

೧೯೨೯ರ ಏಪ್ರಿಲ್ ೮ ರಿಂದ ೧೫ರವರೆಗೆ ಕೊತ್ವಾಲಿ ಸ್ಟೇಷನ್‌ನಲ್ಲಿಯೂ ೧೯ರ ನಂತರ ಸಿವಿಲ್ ಲೈನ್ಸ್ ಬಂಧಿಗಳೂ ಆಗಿದ್ದ ಭಗತ್ ಮತ್ತು ದತ್ ಏಪ್ರಿಲ್ ೨೫ರ ವೇಳೆಗೆ ದೆಹಲಿಯಲ್ಲಿ ಖೈದಿಗಳಾಗಿ ಸರಳುಗಳ ಹಿಂದೆ ಸೆರೆಯಾಳಾದರು.

ಭಗತ್‌ನ ಅನುಪಸ್ಥಿತಿಯಲ್ಲಿ ಹಿಂದೂಸ್ತಾನ್ ಸಮಾಜವಾದಿ ಗಣತಂತ್ರ ಸಂಘಟನೆಯ ಕಾರ್ಯಗಳಲ್ಲಿ ಸ್ವಲ್ಪ ಏರುಪೇರುಗಳಾದವು. ಭಗವತಿ ಚರಣ್‌ರ ಬಾಡಿಗೆ ಮನೆಯು ಬ್ರಿಟಿಷರಿಂದ ದಸ್ತಗಿರಿಯಾಯಿತು. ಅದು ಕ್ರಾಂತಿಕಾರಿಗಳಿಗೆ ಬೇಕಾದ ಬಾಂಬ್‌ಗಳನ್ನು ತಯಾರಿಸುವ ಚಿಕ್ಕ ಕಾರ್ಖಾನೆಯಾಗಿತ್ತು. ಇದು ಕ್ರಾಂತಿಕಾರಿ ಬಣಕ್ಕೆ ಬಲವಾದ ಪೆಟ್ಟಾಯಿತು. ಇದರಿಂದ ಅವರ ಕಾರ್ಯ ಚಟುವಟಿಕೆಗಳೆಲ್ಲ ಸ್ಥಗಿತಗೊಂಡವು.

೧೯೨೯ರ ಜೂನ್ ೧೦ರಂದು ಭಗತ್ ಮತ್ತು ಬಿ.ಕೆ. ದತ್‌ರ ವಿಚಾರಣೆ ಮುಕ್ತಾಯಗೊಂಡು ೧೨ನೇ ತಾರೀಖಿನಿಂದ ಅವರಿಬ್ಬರನ್ನು ಜೀವಾವಧಿ ಕಾಲದ ಗಡಿಪಾರು ಮಾಡುವ ಶಿಕ್ಷೆಯ ತೀರ್ಪು ಹೊರಬಿತ್ತು. ಇದು ನಾಡಿನೆಲ್ಲೆಡೆ ಅಸಮಾಧಾನದ ಬಗ್ಗೆ ಯೋಚಿಸಿತು. ತೀರ್ಪನ್ನು ನಿರಾಕರಿಸಿ ಆಪಾದಿತರಿಬ್ಬರು ಉಚ್ಚ ನ್ಯಾಯಾಲಯಕ್ಕೆ ಅಪವಾಲನ್ನು ಸಲ್ಲಿಸಿದರು. ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆ ನಡೆಯತೊಡಗಿತು. ತನ್ನ ಕಡೆಯಿಂದ ಭಗತ್ ಯಾರನ್ನೂ ನೇಮಿಸಿಕೊಳ್ಳದೆ ತಾನೇ ವಾದ ಮಾಡತೊಡಗಿದ. ಆದರೆ ಯಾವುದೂ ಸರ್ಕಾರದ ಕಿವುಡು ಕಿವಿಗೆ ಕೇಳಿಸದಾಯಿತು. ಸರಳುಗಳ ಹಿಂದಿನ ಸೆರೆಯೇ ಮತ್ತೆ ಜೀವನವಾಯಿತು. ಭಗತ್‌ನನ್ನು ಹಲವಾರು ಜೈಲುಗಳಿಗೆ ಆಗಾಗ್ಗೆ ವರ್ಗಾಯಿಸಲಾಗುತ್ತಿತ್ತು.

ಕ್ರಾಂತಿಕಾರಿ ರಕ್ತಕ್ಕೆ ಅರಮನೆಯಾದರೇನು? ಸೆರೆಮನೆಯಾದರೇನು? ಎಂಬುದಕ್ಕೆ ಜೈಲಿನಲ್ಲಿಯೂ ಭಗತ್‌ಸಿಂಗ್ ಹೊತ್ತಿಸಿದ ಕ್ರಾಂತಿಯ ಕಿಡಿಯೇ ಉದಾಹರಣೆ. ಲಾಹೋರಿನ ಜೈಲಿನಲ್ಲಿ ಖೈದಿಗಳಿಗೆ ಕನಿಷ್ಠ ಅನಿವಾರ್ಯ ವಸ್ತುಗಳ ಪೂರೈಕೆಯಾಗುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಅವರಿಗೆ ಬೇಕಾದ ಅವಶ್ಯಕತೆಗಳನ್ನು ಪೂರೈಸುವಂತೆ ಬೇಡಿಕೆಗಳನ್ನು ಮುಂದಿರಿಸಿಕೊಂಡು ೧೯೨೯ರ ಜೂನ್ ೧೫ರಂದು ಉಪವಾಸ ಸತ್ಯಾಗ್ರಹ ಆರಂಭಿಸಿದರು. ಜುಲೈ ೯ರ ವೇಳೆಗೆ ಭಗತ್ ಸಿಂಗ್ ಬಹಳ ಕೃಶವಾದ ಆರೋಗ್ಯ ಹದಗೆಟ್ಟಿತು. ಜನತೆ ತಳಮಳಗೊಂಡಿತು. ಈ ಹಿನ್ನೆಲೆಯಲ್ಲಿ ಲಾಹೋರಿನಲ್ಲೊಂದು ಪ್ರತಿಭಟನಾ ಸಭೆ ಸಾವಿರಾರು ಜನರನ್ನೊಳಗೊಂಡು ಬಹಳ ಯಶಸ್ವಿಯಾಗಿ ನಡೆಯಿತು. ಸರ್ಕಾರ ಅವರ ಬೇಡಿಕೆಗಳನ್ನು ಪೂರೈಸುವ ಬದಲು, ಬಲವಂತವಾಗಿ ಆಹಾರ ಸೇವನೆ ಮಾಡುವಂತೆ ಒತ್ತಾಯಿಸಿತು. ಜುಲೈ ೧೪ರಂದು ಸರ್ಕಾರವು ಭಗತ್ ಸಿಂಗ್ ಹಾಗೂ ಬಿ.ಕೆ.ದತ್‌ರಿಗೆ ಮಾತ್ರ ವಿಶೇಷ ಸವಲತ್ತು ನೀಡಬೇಕೆಂದು ಆಗ್ರಹಪಡಿಸಿತು. ಭಗತ್ ಸಿಂಗ್ ಜೈಲಿನ ಮುಖ್ಯ ಅಧಿಕಾರಿಯನ್ನು ಕರೆದು ಹೇಳಿದ "ನಾವು ಕೇಳುವುದು ಸ್ವಾತಂತ್ರ್ಯವನ್ನು, ನಿಮ್ಮ ಸವಲತ್ತುಗಳನ್ನಲ್ಲ". ಎಲ್ಲರಿಗೂ ಸಮಾನವಾದ ವ್ಯವಸ್ಥೆ ನೀಡಬೇಕೆಂಬುದೇ ಅವನ ಖಚಿತ ನಿಲುವಾಗಿತ್ತು. ಕ್ರಾಂತಿಕಾರಿ ನೇತಾರ ಜತೀಂದ್ರನಾಥ್‌ರವರು ಅರವತ್ತುನಾಲ್ಕು ದಿನಗಳ ತೀವ್ರ ಉಪವಾಸದಿಂದ ಬಳಲಿ ೨೯೩೯ರ ಸೆಪ್ಟೆಂಬರ್

೧೩ರಂದು ಅಂತಿಮ ಉಸಿರೆಳೆದರು. ಅವರನ್ನು ಜೇಷರತ್ತಿನ ಮೇಲೆ ಬಿಡುಗಡೆ ಮಾಡಬೇಕೆಂಬ ಭಗತ್‌ಸಿಂಗ್ ಮತ್ತು ಆತನ ಗೆಳೆಯರ ಬೇಡಿಕೆಗಳು ಬೇಡಿಕೆಗಳಾಗಿಯೇ ಉಳಿದವು.

ಈ ನಡುವೆ, ಭಗತ್‌ನ ಮೇಲಿದ್ದ ಸಾಂಡರ್ಸ್ ಹತ್ಯೆಗೆ ಸಂಬಂಧಿಸಿದ ಮೊಕದ್ದಮೆಯ ವಿಚಾರಣೆ ಅಡೆತಡೆಯಿಲ್ಲದೆ ಸಾಗುತ್ತಿತ್ತು. ಬಾಂಬ್ ಹಗರಣದ ಮೊಕದ್ದಮೆಯ ವಿಚಾರಣೆ ಮುಗಿದ ಒಂದು ತಿಂಗಳ ನಂತರ, ಅಂದರೆ ೧೯೨೯ರ ಜುಲೈ ೧೦ರಿಂದ ಸಾಂಡರ್ಸ್ ಹತ್ಯೆಯ ಮೊಕದ್ದಮೆ ವಿಚಾರಣೆ ಪ್ರಾರಂಭವಾಯಿತು. ೧೯೨೯ರ ಡಿಸೆಂಬರ್ ೧೯ರಂದು ಭಗತ್ ಸಿಂಗ್ ಕಟ್ಟಾಜ್ಞೆಯ ಮೇರೆಗೂ ಕಾಕೋರಿ ಹುತಾತ್ಮರ ಆತ್ಮಶಾಂತಿ ಕೋರಿ ಕ್ರಾಂತಿಗೀತೆಗಳನ್ನು ಹಾಡಿದ. ೧೯೩೦ರ ಜನವರಿ ೨೧ರಂದು ವಿಚಾರಣೆಗೆ ಕರೆತಂದಾಗ, ಆರೋಪಿಗಳೆಲ್ಲ ಲೆನಿನ್ ದಿನದ ಪ್ರಯುಕ್ತ ಕುತ್ತಿಗೆಗೆ ಕೆಂಪು ಪಟ್ಟಿ ಧರಿಸಿದ್ದರು. ಹೀಗೆ ವಿಚಾರಣೆಯ ಸಮಯ ಒಂದಲ್ಲ ಒಂದು ಅಡಚಣೆಗಳು ಮುಂದಾಗುತ್ತಿದ್ದುದರಿಂದ ಸರ್ಕಾರವು ಬೇಸತ್ತು, ಕಟ್ಟಕಡೆಗೆ ನ್ಯಾಯಾಧೀಶ ಕೋಲ್ಡ್ ಸ್ಟ್ರೀಮ್‌ರವರ ಅಧ್ಯಕ್ಷತೆಯಲ್ಲಿ ಆಗಾಹೈದರ್ ಹಾಗೂ ಜೆ.ಸಿ.ಹಿಲ್ಟನ್ ಎಂಬ ನ್ಯಾಯಮೂರ್ತಿಗಳನ್ನೊಳಗೊಂಡ ಸಮಿತಿಯನ್ನು ಹತ್ತಿಕ್ಕಲೆಂದು ನಿಯೋಜಿಸಿತು.

೧೯೩೦ರ ಮೇ ೫ರಂದು ಆಪಾದಿತರನ್ನು ವಿಚಾರಣೆಗೆ ಸಮಿತಿಯ ಮುಂದೆ ಹಾಜರುಪಡಿಸಲಾಯಿತು. ಈ ಮೂರು ನ್ಯಾಯಾಧೀಶರು ಹಾಗೂ ಆಪಾದಿತರ ನಡುವೆ ತೀವ್ರ ಮಾತಿನ ವಾಗ್ವಾದ ನಡೆದು, ಭಗತ್ ಕೇಳಿದ ಕೆಲವು ಅರ್ಥಗರ್ಭಿತ ಪ್ರಶ್ನೆಗಳಿಗೆ ಬ್ರಿಟಿಷ್ ಸರ್ಕಾರದ ಎದೆ ನಡುಗಿಹೋಯಿತು. ಸಮಿತಿಯ ಸದಸ್ಯರ ನಡುವೆಯೇ ಒಮ್ಮತವಿಲ್ಲದಾಯಿತು. ಸರ್ಕಾರ ಹಿಲ್ಟನ್‌ನ ಅಧ್ಯಕ್ಷತೆಯಲ್ಲಿ ಜಿ.ಕೆ.ಟ್ಯಾಪ್ ಮತ್ತು ಅಬ್ದುಲ್ ಖಾದಿರ್‌ರನ್ನು ಒಳಗೊಂಡ ಸಮಿತಿಯನ್ನು ನೇಮಿಸಿತು. ಆದರೆ ಭಗತ್‌ಸಿಂಗ್ ಮತ್ತು ಸಂಗಡಿಗರು ಆ ಸಮಿತಿಯ ಕಾರ್ಯವನ್ನು ನ್ಯಾಯಬಾಹಿರವೆಂದು ಅಲ್ಲಗಳೆದರು. ಭಗತ್‌ನ ಘೋಷಣೆಗಳಿಗೆ ಮಾರುಹೋಗಿ, ಮುಂದೆ ಜಿ.ಎನ್.ಸನ್ಯಾಲರು ಅವರುಗಳ ವಕಾಲತ್ತು ವಹಿಸಿಕೊಂಡರು.

ಇತ್ತ ಭಗತ್‌ನ ತಂದೆ ಕಿಶನ್‌ಸಿಂಗ್ ಮಗನ ಪರವಾಗಿ ಆತ ನಿರ್ದೋಷಿಯೆಂದು ಸಾಬೀತುಪಡಿಸಲು ಬಹಳ ಪ್ರಯತ್ನ ನಡೆಸುತ್ತಿದ್ದ. ಅದನ್ನರಿತ ಭಗತ್, ತನ್ನ ತಂದೆಗೆ ಈ ರೀತಿಯಾಗಿ ಪತ್ರ ಬರೆದ :

"..... ನನ್ನ ಮಟ್ಟಿಗೆ ಹೇಳುವುದಾದರೆ, ನನ್ನ ಜೀವ ನೀನು ತಿಳಿದಿರುವಷ್ಟು ಅಮೂಲ್ಯವಾದುದೇನೂ ಅಲ್ಲ. ನನ್ನ ತತ್ವಗಳನ್ನು ಬದಿಗೊತ್ತಿ ಅದನ್ನು ಉಳಿಸಿಕೊಳ್ಳಬೇಕಾದ ಪ್ರಮೇಯವಂತೂ ಇಲ್ಲವೇ ಇಲ್ಲ. ನನ್ನಷ್ಟೇ ಗಂಭೀರವಾಗಿ ನನ್ನ ಸಂಗಾತಿಗಳೂ ಇದನ್ನು ಎದುರಿಸುತ್ತಿದ್ದಾರೆ. ನಾವೆಲ್ಲ ಏಕರೂಪವಾದ ನೀತಿಯನ್ನು ಅನುಸರಿಸುತ್ತಿದ್ದೇವೆ. ಮುಂದೆಯೂ ಹಾಗೆಯೇ ಉಳಿಯುತ್ತೇವೆ. ವೈಯಕ್ತಿಕವಾಗಿ ಇದಕ್ಕೆ ನಾವು ಬೆಲೆಯನ್ನು ತೆರಲೂ ಸಹ ಸಿದ್ಧರಾಗಿದ್ದೇವೆ. ...... ನೀನೂ ದೇಶಭಕ್ತನೆಂಬುದು ನನಗೆ ಗೊತ್ತಿದೆ. ಭಾರತದ ಸ್ವಾತಂತ್ರ್ಯಕ್ಕಾಗಿ ನಿನ್ನ ಜೀವನವನ್ನು ಮುಡುಪಾಗಿಟ್ಟಿದ್ದೀಯೆ ಎಂಬುದು ಸರ್ವ ವಿಧಿತ. ಆದರೆ ಈ ಸಂದರ್ಭದಲ್ಲಿ ನೀನೇಕೆ ಇಷ್ಟು ಬಲಹೀನತೆಯನ್ನು ಪ್ರದರ್ಶಿಸಿದೆ? ಇದು ನನಗಂತೂ ಅರ್ಥವಾಗುವುದಿಲ್ಲ".

ಮೇಲಿನ ಪತ್ರ ಭಗತ್‌ನ ವ್ಯಕ್ತಿತ್ವದ ಸಾಕಾರವಾಗಿದೆ. ಆತನಲ್ಲಿ ಕ್ಷಣಕ್ಷಣವು ತುಡಿಯುತ್ತಿದ್ದ ದೇಶಪ್ರೇಮ, ಅದಕ್ಕಾಗಿ ತನ್ನೆಲ್ಲವನ್ನು ತ್ಯಾಗ ಮಾಡಲು ಸಿದ್ಧವಿರುವ ಮನೋವೃತ್ತಿ ಎಲ್ಲವೂ ಸ್ಪಷ್ಟವಾಗಿ ಚಿತ್ರಿತವಾಗಿದೆ.

ಇತ್ತ ಭಗತ್ ನೇಣುಗಂಬದ ಕರಿನೆರಳ ಛಾಯೆಯಲ್ಲಿ ದಿನ ದೂಡುತ್ತಿದ್ದರೆ ಅತ್ತ ಹಿಂದೂಸ್ತಾನ್ ಸಮಾಜವಾದಿ ಗಣತಂತ್ರ ಸಂಘಟನೆಗೆ ಭರಿಸಲಾರದ ಎರಡು ಪೆಟ್ಟು ಬಿದ್ದವು. ಮೊದಲನೆಯದು



06206
HEALTH
MUNITY
LIBRARY
AND
TATION

ಬಾಂಬ್ ತಯಾರಿಕೆಯಲ್ಲಿ ತೊಡಗಿದ್ದ ಭಗವತೀ ಚರಣ್‌ನ ಆಕಸ್ಮಿಕ ಬಾಂಬ್ ಸ್ಫೋಟದಿಂದಾದ ಮರಣ ಹಾಗೂ ಎರಡನೆಯದು, ಬ್ರಿಟಿಷರ ಸೈನಿಕರ ನಡುವೆ ೧೯೩೧ರ ಫೆಬ್ರವರಿ ೨೮ರಂದು ಉಂಟಾದ ಕಲಹದಲ್ಲಿ ಸಾವಿಗೀಡಾದ ಚಂದ್ರಶೇಖರ್ ಆಜಾದ್‌ನ ಮರಣ. ಕಷ್ಟಗಳು ಬರತೊಡಗಿದರೆ ಜೀವವನ್ನು ನಾಶ ಮಾಡುವವರೆಗೆ ಹೋಗುವುದೇ ಇಲ್ಲ ಎಂಬುದಕ್ಕೆ ಇದೇ ಸಾಕ್ಷಿ. ಅವುಗಳನ್ನು ತಾಳ್ಮೆಯಿಂದ ನಿಗ್ರಹಿಸಿ ಎದೆಕೊಟ್ಟು ನಿಲ್ಲುವವನು ಎಂದೂ ಗೆಲ್ಲುತ್ತಾನೆ. ಈ ಎರಡು ಭಾರೀ ಹೊಡೆತದ ಪರಿಣಾಮವಾಗಿ ಸಂಘಟನೆಯ ಅರ್ಧ ಜೀವ ಕಳಚಿಹೋದಂತಾಯಿತು. ಅದು ಅಳಿವು ಉಳಿವುಗಳ ತೂಗುಯ್ಯಾಲೆಯಲ್ಲಿ ಆಡತೊಡಗಿತು.

ಭಗತ್‌ಸಿಂಗ್‌ನ ವಿರುದ್ಧ ಅಪಾದನೆಗಳು ಇಂಡಿಯನ್ ಪೀನಲ್ ಕೋಡಿನ ೧೨೧, ೩೦೨ನೇ ವಿಧಿ ಹಾಗೂ ೧೨೦ ನೇ(ಅ) ಸ್ಫೋಟಕ ದ್ರವ್ಯಗಳ ವಿಧಿ, ೬ (ಊ)ನ ಜೊತೆಗೆ ಇದೇ ಕಾಯ್ದೆಯ ೪(ಅ) ವಿಭಾಗದ ಮೇಲೆ ಆಧಾರಗೊಂಡಿದ್ದವು. ವಿಚಾರಣೆಯನ್ನೆಲ್ಲ ನ್ಯಾಯಾಧೀಶರು ಪರಿಶೀಲಿಸಿ ಈ ರೀತಿಯಾಗಿ ತೀರ್ಪನ್ನು ನೀಡಿದರು : "ಉದ್ದೇಶಪೂರ್ವಕವಾಗಿಯೇ, ತಾವೆಸಗುತ್ತಿರುವ ಕಾರ್ಯ ಕಾನೂನುಬಾಹಿರವೆಂದರಿತು ಸಹ, ಹೇಡಿತನದ ಹತ್ಯೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಹಾಗೂ ಪಿತೂರಿಯ ಪ್ರಮುಖ ಸದಸ್ಯನಾಗಿದ್ದ ಕಾರಣ, ಭಗತ್‌ಸಿಂಗ್ ಎಂಬ ಅಪಾದಿತನನ್ನು ನೇಣುಶಿಕ್ಷೆಗೆ ಗುರಿಪಡಿಸಬೇಕೆಂದು ಸೂಚಿಸಿದೆ. ರಾಜಗುರು ಹಾಗೂ ಸುಖದೇವರೂ ಈ ಶಿಕ್ಷೆಯಿಂದ ಹೊರತಾಗಲಿಲ್ಲ".

ಭಗತ್‌ನಲ್ಲಿ ದೇಶಪ್ರೇಮದ ಭಾವನೆ ಎಷ್ಟರಮಟ್ಟಿಗೆ ಆಳವಾಗಿ ಬೇರೂರಿತ್ತೆನ್ನುವುದಕ್ಕೆ ಈ ಘಟನೆ ಉತ್ತಮ ಉದಾಹರಣೆಯೆನಿಸುತ್ತದೆ. ತನ್ನ ಶಿಕ್ಷೆಯಲ್ಲಿ ಕನಿಷ್ಠ ರಿಯಾಯಿತಿ ನೀಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಬೇಕೆಂದು ಬಹಳ ಒತ್ತಾಯಿಸಿದ ಆತ್ಮೀಯರೊಬ್ಬರ ಸಲಹೆಗೆ ಭಗತ್ ನುಡಿದ: "ಅದರ ಅವಶ್ಯಕತೆ ನನಗಿಲ್ಲ. ಅದರಿಂದಾಗುವ ಪ್ರಯೋಜನವೂ ಇಲ್ಲ. ಸಾಮ್ರಾಜ್ಯಶಾಹಿ ನ್ಯಾಯಾಲಯಗಳಿಂದ ನಾವು ಎಂದಿಗೂ ನ್ಯಾಯವನ್ನು ನಿರೀಕ್ಷಿಸಲಾಗದು. ನ್ಯಾಯಾಲಯ ನೀಡಿರುವ ಸದರಿ ತೀರ್ಪು ಜಾರಿಯಾಗುತ್ತದೆ. ಶತ್ರುವಿನಿಂದ ಪ್ರಾಣ ರಕ್ಷಣೆ ಬೇಡುವುದಕ್ಕಿಂತ ಸಾಯುವುದು ಸಾವಿರ ಪಾಲು ಸುಖವಾಗಿರುತ್ತದೆ. ನಾನು ಎಂದೆಂದೂ ಭಾರತ ಮಾತೆಗೆ ಚಿರಋಣಿ."

೧೯೩೦ರ ಅಕ್ಟೋಬರ್ ೭ರಂದು ನ್ಯಾಯಾಲಯವು ನೀಡಿದ ತೀರ್ಪನ್ನು ಕೇಳಿ ಬ್ರಿಟನ್ ಕಮ್ಯುನಿಸ್ಟ್ ಪಕ್ಷ ಕ್ರೋಧಗೊಂಡು "ಜನರನ್ನು ಭಯದ ಬಾಯಿಗೆ ತಳ್ಳುವಲ್ಲಿ ಸಾಮ್ರಾಜ್ಯಶಾಹಿ ಸರ್ಕಾರ ತನ್ನ ದಬ್ಬಾಳಿಕೆಯ ತೀರ್ಪನ್ನು ನೀಡಿದೆ" ಎಂದು ಘೋಷಿಸಿತು. ಬರ್ಲಿನ್ ಪತ್ರಿಕೆಯೊಂದು ಸರ್ಕಾರದ ವರ್ತನೆಯನ್ನು ಬಹುವಾಗಿ ಖಂಡಿಸಿ "ಇದು ಮ್ಯಾಕ್‌ಡೊನಾಲ್ಡ್‌ನ ರಾಜಕೀಯ ಕುತಂತ್ರ"ವೆಂದು ಜರಿಯಿತು.

ಆದರೆ, ಈ ಘೋಷಣೆ, ಜರೆಯುವಿಕೆಗಳಾವೂ ಪ್ರಯೋಜನಕ್ಕೆ ಬಾರದಾದವು. ನೇಣುಗಂಬ ಮೂವರನ್ನು ಕೈ ಬೀಸಿ ಕರೆಯುತ್ತಿತ್ತು. ೧೯೩೧ರ ಮಾರ್ಚ್ ೨೩ರಂದು ಮೂವರು ದೇಶಪ್ರೇಮಿಗಳು ನೇಣುಗಂಬದ ಹುರಿಯಲ್ಲಿ ನೇತಾಡುತ್ತಿದ್ದರು.

ಬ್ರಿಟಿಷ್ ಸರ್ಕಾರ ಮಹತ್ತನ್ನು ಸಾಧಿಸಿದೆವೆಂಬ ಗರ್ವದಿಂದ ಬೀಗುತ್ತಿತ್ತು. ಲಕ್ಷಾಂತರ ಭಾರತೀಯರು ದುಃಖದ ಕಣ್ಣೀರಿಡುತ್ತಿದ್ದರು. ಕುಯುಕ್ತಿಯಿಂದ ಸರ್ಕಾರವು ಮೂವರನ್ನು ಕೊಲೆ ಮಾಡಿತೇ ಹೊರತು ಅವರ ಭಾವನೆಗಳು, ಆದರ್ಶಗಳು, ಜೀವನ ಧ್ಯೇಯಗಳನ್ನು ಕೊಲೆ ಮಾಡಲಾಗಲಿಲ್ಲ. ಈ ಕ್ಷಣವೂ ಅವರು ನಮ್ಮೊಡನಿದ್ದಾರೆಂಬುದಕ್ಕೆ ಇಂದು ನಾವುಗಳು ಅವರನ್ನು ನೆನೆಯುತ್ತಿರುವುದೇ ದೊಡ್ಡ ಸಾಕ್ಷಿ. ಭಗತ್ ಸಿಂಗ್, ಸುಖದೇವ್ ಮತ್ತು ರಾಜಗುರು ಅಂದು ಚಿರಾಯುವಾದರು.

# ಅಧ್ಯಾಯ ೧

## ಚಿಂತನೆಯ ನೆಲೆ

'ಎಂತೆಂತು ಚಿಂತಿಪುದೋ ಬುದ್ಧಿ
ಅಂತಂತೆ ಆಗುವುದು ಸಿದ್ಧಿ
ಎತ್ತೆತ್ತ ಚಲಿಸುವುದೊ ಮನವು
ಅತ್ತತ್ತ ಚಲಿಸುವುದು ತನುವು'

– ಕುವೆಂಪು

ಭಗತ್ ಸಿಂಗ್‌ನ ವ್ಯಕ್ತಿತ್ವದ ಬಗ್ಗೆ ಮಾತನಾಡುವಾಗ ಆತನ ತಾತ್ವಿಕ ಜೀವನವನ್ನು ಕುರಿತು ಹೇಳದಿದ್ದರೆ ತಪ್ಪಾಗುತ್ತದೆ. ಅವನೆಲ್ಲ ಹೋರಾಟದ ಬದುಕು ತಾತ್ವಿಕ ಜೀವನದ ಬಿಂಬವಷ್ಟೆ. ಅವನ ತಾತ್ವಿಕ ನೆಲೆಯನ್ನು ತಿಳಿಸದೆ, ಅವನ ವ್ಯಕ್ತಿತ್ವ ಪರಿಪೂರ್ಣವಾಗಲಾರದು. ತಾತ್ವಿಕ ಬಲ, ವಿಚಾರದಲ್ಲಿ ಸ್ಪಷ್ಟ ನಿಲುವು ಇಲ್ಲದಿದ್ದರೆ ಜೀವನದಲ್ಲಿ ಏನೂ ಸಾಧಿಸಲಾಗದು ಎಂಬುದಕ್ಕೆ ಭಗತ್‌ಸಿಂಗ್‌ನೇ ಉತ್ತಮ ಉದಾಹರಣೆ. ಇಂದು ಆತನ ವ್ಯಕ್ತಿತ್ವದ ಪೂರ್ಣ ಪರಿಚಯ ನಮ್ಮಲ್ಲಿ ಇಲ್ಲದಿರುವುದು ನಮ್ಮಗಳ ದುರದೃಷ್ಟವೇ ಸರಿ.

ಭಗತ್ ಸಿಂಗ್‌ನ 'ನಾನೇಕೆ ನಾಸ್ತಿಕ' ಎಂಬ ಕೃತಿಯಲ್ಲಿ ವ್ಯಕ್ತವಾಗಿರುವ ವಿಚಾರಗಳು, ಧೋರಣೆಗಳು, ತತ್ವಗಳು ಒಂದು ಕ್ಷಣ ನಾವೂ ಅವನೊಡನೆ ತಲೆದೂಗುವಂತೆ ಮಾಡುತ್ತವೆ. ಆದರೆ ಅವುಗಳನ್ನೆಲ್ಲಾ ಆಚರಣೆಗೆ ತರುವ ಕೆಚ್ಚೆದೆ, ಗುಂಡು ಹೃದಯ ಎಷ್ಟು ಜನರಿಗಿದ್ದೀತು? ಎಷ್ಟೇ ಉನ್ನತ ಆದರ್ಶಗಳು, ಮೌಲ್ಯಗಳು ನಮ್ಮಲ್ಲಿದ್ದರೂ ಅವು ಆಚರಣೆಗೆ ಬರದಿದ್ದರೆ ವ್ಯರ್ಥವಾಗುತ್ತದೆ. ಅವನ್ನು ಅಳವಡಿಸಿಕೊಂಡು, ಬೆಳೆಸುವ ಹೃದಯವೂ ನಮ್ಮಲ್ಲಿರಬೇಕು. ಅದಕ್ಕಾಗಿ ಎಂತಹ ತ್ಯಾಗಕ್ಕಾದರೂ ಸಿದ್ಧವಿರಬೇಕು. ಏಕೆಂದರೆ, ಸಮಾಜದ ರೂಢಿಗಳ ವಿರುದ್ಧವಾಗಿ ತನ್ನದೇ ಆದ ಹೊಸ ಮೌಲ್ಯಗಳನ್ನು ಪ್ರತಿಪಾದಿಸುವುದು ಅಷ್ಟು ಸುಲಭವಾದ ಕಾರ್ಯವಲ್ಲ. ಬಲವಂತವಾಗಿ ಆಚರಣೆಗೆ ತರಲೆತ್ನಿಸಿದರೆ ಸಾಕ್ರಟೀಸ್‌ನಿಂದ ಹಿಡಿದು ಭಗತ್‌ಸಿಂಗ್‌ನವರೆಗೆ ಇತಿಹಾಸ ನಡೆದು ಬಂದಿರುವ ಕರಾಳ ದಿನಗಳು ಮತ್ತೆ ಮತ್ತೆ ಮರುಕಳಿಸುತ್ತವೆ. ಮೌಢ್ಯಗಳು, ಅರ್ಥವಿಲ್ಲದ ನಂಬಿಕೆಗಳು, ಸಂಪ್ರದಾಯಗಳು ನಮ್ಮ ಆದರ್ಶಗಳ

ಮೇಲೆ ಕರಿನೆರಳ ಛಾಯೆ ಬೀಸಲು ಬಹಳ ಕಾಲ ಬೇಕಾಗುವುದಿಲ್ಲ. ಭಗತ್ ಸಿಂಗ್‌ನ 'ನಾನೇಕೆ ನಾಸ್ತಿಕ' ಕೃತಿ ಅವನ ವ್ಯಕ್ತಿತ್ವದ ಪೂರ್ಣ ಪರಿಚಯಕ್ಕೆ ಸಹಕಾರಿಯಾಗುತ್ತದೆ.

'ನಂಬಿಕೆ'ಯು ಕಷ್ಟ ಕಾರ್ಪಣ್ಯಗಳನ್ನು ಹಗುರಗೊಳಿಸುತ್ತದೆ; ಮಾತ್ರವಲ್ಲ, ಅವುಗಳನ್ನು ಅದು ಆಹ್ಲಾದಯಮಾನವಾಗಿಯೂ ಮಾಡಬಹುದು. ದೇವರಲ್ಲಿ ಮನುಷ್ಯನು ಅತ್ಯಂತ ಹೆಚ್ಚಿನ ಸಾಂತ್ವನ ಮತ್ತು ಬೆಂಬಲವನ್ನು ಪಡೆಯಬಹುದು. ದೇವರಿಲ್ಲದಿದ್ದರೆ ಮಾನವ ಸಂಪೂರ್ಣವಾಗಿ ತನ್ನನ್ನೇ ತಾನು ಆಶ್ರಯಿಸಬೇಕಾಗುತ್ತದೆ. ಭೀಕರ ಪ್ರವಾಹ ಮತ್ತು ಬಿರುಗಾಳಿಗಳ ನಡುವೆ ಒಬ್ಬ ವ್ಯಕ್ತಿ ತನ್ನ ಕಾಲ ಮೇಲೆ ತಾನು ನಿಂತುಕೊಳ್ಳುವುದು ಹುಡುಗಾಟವಲ್ಲ. ಒಟ್ಟಿನಲ್ಲಿ ಅಹಂಕಾರವೇನಾದರೂ ಇದ್ದರೆ ಅಂತಹ ಪರೀಕ್ಷೆಯ ಕ್ಷಣಗಳಲ್ಲಿ ಅದು ಕರಗಿ ಹೋಗುತ್ತದೆ ಮತ್ತು ಸಾಮಾನ್ಯ ನಂಬಿಕೆಗಳನ್ನು ಎದುರಿಸಲು, ನಿರಾಕರಿಸಲು ಮನುಷ್ಯ ಹೆದರುತ್ತಾನೆ. ಹಾಗೆ ಎದುರಿಸಿದರೆ, ಅವನಿಗೆ ಅಹಂಕಾರದಿಂದ ಹೊರತಾದ ಬೇರೆ ಏನಾದರೂ ಶಕ್ತಿಯಿರಲೇಬೇಕೆಂದು ನಾವು ತೀರ್ಮಾನಿಸಬೇಕಾಗುತ್ತದೆ. ಈಗಿನ ಪರಿಸ್ಥಿತಿ ಇದೇ ಆಗಿದೆ. ನಮ್ಮ ವಿರುದ್ಧದ ಅಂತಿಮ ತೀರ್ಪು ಈಗಾಗಲೇ ಸುವ್ಯಕ್ತವಾಗಿದೆ. ಒಂದು ವಾರದೊಳಗೆ ಅದು ಪ್ರಕಟವಾಗಲಿದೆ. ಶ್ರೇಷ್ಠ ಧ್ಯೇಯಕ್ಕಾಗಿ ನನ್ನ ಪ್ರಾಣಾರ್ಪಣೆ ಮಾಡುತ್ತಿರುವೆನೆಂಬ ಸಾರ್ಥಕ ನಿರ್ಧಾರಕ್ಕಿಂತ ಬೇರೆ ಎಂತಹ ಸಾಂತ್ವನ ನನಗೆ ಬೇಕಾಗಿದೆ? ಒಬ್ಬ ದೈವಭಕ್ತನಾದ ಹಿಂದೂವೇನೋ ಮರುಜನ್ಮದಲ್ಲಿ ಒಬ್ಬ ರಾಜನಾಗಿ ಹುಟ್ಟುವ ಕನಸು ಕಾಣಬಹುದು. ಇಸ್ಲಾಂ ಮತ್ತು ಕ್ರೈಸ್ತ ಧರ್ಮದವರು ಎಲ್ಲಾ ಸುಖ ಸಂತೋಷಗಳನ್ನು ಸವಿಯಬಹುದಾದ ಸುಂದರ ಸ್ವರ್ಗದ ಕನಸು ಕಾಣಬಹುದು. ಇಲ್ಲಿಯ ನೋವು ಮತ್ತು ತ್ಯಾಗಗಳಿಗೆ ಪ್ರತಿಯಾಗಿ ದೊರೆಯಬಹುದಾದ ಪುರಸ್ಕಾರವನ್ನವರು ನಿರೀಕ್ಷಿಸಬಹುದು. ಆದರೆ ನಾನಾದರೋ ಏನನ್ನು ಅಪೇಕ್ಷಿಸಬಹುದು? ಹಗ್ಗವು ನನ್ನ ಕುತ್ತಿಗೆಯ ಸುತ್ತ ಬಿದ್ದು ನನ್ನ ಕಾಲ ಕೆಳಗಿನ ಹಲಗೆಯನ್ನು ಎಳೆದು ಹಾಕಿದಾಗ, ಆ ಕ್ಷಣವೇ ನನ್ನ ಕಡೆಯ ಕ್ಷಣವೆಂಬುದು ನನಗೆ ಚೆನ್ನಾಗಿ ಗೊತ್ತು. ನಾನು ಅಥವಾ ಇನ್ನೂ ನಿಷ್ಕೃಷ್ಟವಾಗಿ ಆಧ್ಯಾತ್ಮದ ಪರಿಭಾಷೆಯಲ್ಲಿ ಹೇಳಬೇಕೆಂದರೆ, ನನ್ನ 'ಆತ್ಮ' ಇಲ್ಲಿಗೆ ಕೊನೆಯಾಗುತ್ತದೆ. ಮುಂದೆ ಏನೂ ಉಳಿಯುವುದಿಲ್ಲ. ಅಂಥ ಅದ್ಭುತವಾದ ಕೊನೆ ಇದಲ್ಲದಿದ್ದರೂ ಹೋರಾಟದ ನನ್ನ ಪುಟ್ಟ ಜೀವನವೇ ಒಂದು ಪುರಸ್ಕಾರವಾಗಿರುತ್ತದೆ. ಆ ಅರ್ಥದಲ್ಲಿ ಅದನ್ನು ತೆಗೆದುಕೊಳ್ಳುವ ಎದೆಗಾರಿಕೆ ನನ್ನಲ್ಲಿದ್ದರೆ! ಇದಕ್ಕಿಂತ ಬೇರೇನೂ ಇಲ್ಲ. ಸ್ವಾರ್ಥ ಸಾಧನೆಯ ಯಾವ ಉದ್ದೇಶವೂ ಇಲ್ಲದೆ, ಇಲ್ಲಿಯಾಗಲಿ ಅಥವಾ ಇಲ್ಲಿಂದಾಚೆಯಾಗಲಿ ಯಾವ ಪುರಸ್ಕಾರವನ್ನು ಪಡೆಯುವ ಅಭಿಲಾಷೆಯಿಲ್ಲದೆ, ಸ್ವಾತಂತ್ರ್ಯದ ಧ್ಯೇಯಕ್ಕಾಗಿ ನಾನು ನಿಷ್ಕಾಮ ಮನೋಭಾವದಿಂದ ನನ್ನ ಜೀವನವನ್ನು ಮುಡಿಪಾಗಿರಿಸಿದ್ದೇನೆ. ಇದಕ್ಕೆ ವ್ಯತಿರಿಕ್ತವಾಗಿ ಬೇರೆ, ಏನನ್ನೂ ಮಾಡಲು ನನ್ನಿಂದ ಸಾಧ್ಯವಿರಲಿಲ್ಲ. ಈ ರೀತಿಯಲ್ಲಿ ಮಾನವ ಕುಲದ ಸೇವೆಗಾಗಿ ಮತ್ತು ದುಃಖಪೀಡಿತ ಜನತೆಯ ವಿಮೋಚನೆಗಾಗಿ ತಮ್ಮ ಬದುಕನ್ನು ಧಾರೆಯೆರೆಯುವ ಮನೋಭಾವವುಳ್ಳ ಸ್ತ್ರೀಯರು ಮತ್ತು ಪುರುಷರು ದೊಡ್ಡ ಸಂಖ್ಯೆಯಲ್ಲಿ ಎಂದಾದರೊಂದು ದಿನ ನಮಗೆ ದೊರೆತಲ್ಲಿ ಆ ದಿನದಂದು ಸ್ವಾತಂತ್ರ್ಯದ ಯುಗ ಆರಂಭವಾಗಲಿದೆ. ಆದರೆ ವರ್ತಕರನ್ನು, ಶೋಷಕರನ್ನು ಮತ್ತು ಪ್ರಜಾಪೀಡಕ ದೊರೆಗಳನ್ನು ಎದುರಿಸಲು ಅವರಿಗೆ ಸ್ಫೂರ್ತಿ ಎಲ್ಲಿಂದ ಬರಬೇಕು? ರಾಜರಾಗುವ ಇಚ್ಛೆಯಿಂದಲ್ಲ, ಈ ಜನ್ಮದಲ್ಲಾಗಲೀ, ಮುಂದಿನ ಜನ್ಮದಲ್ಲಾಗಲೀ ಅಥವಾ ಮರಣಾನಂತರ ಸ್ವರ್ಗದಲ್ಲಾಗಲಿ ಪ್ರತಿಫಲ ಪಡೆಯುವ ಅಪೇಕ್ಷೆಯಿಂದಲ್ಲ! ಬದಲು ಮಾನವ ಕುಲದ ಕತ್ತಿನಿಂದ ದಾಸ್ಯದ ನೊಗವನ್ನು ಕಿತ್ತೊಗೆದು, ಸ್ವಾತಂತ್ರ್ಯ ಮತ್ತು ಶಾಂತಿಯನ್ನು ಸ್ಥಾಪಿಸುವುದಕ್ಕಾಗಿ ಈ ಅಮೋಘವಾದ ಪಥವನ್ನು ಅವರು

ತುಳಿಯಬೇಕಾಗುತ್ತದೆ. ವೈಯಕ್ತಿಕವಾಗಿ ಅಪಾಯಕಾರಿಯೆನಿಸಿದರೂ, ಆ ಧೀರೋದಾತ್ತರ ಒರಿದಾದ ಉದ್ದೇಶದ ಸಾಧನೆಗಾಗಿ ಇರುವುದು ಇದೊಂದೇ ಶ್ರೇಯಸ್ಕರವಾದ ಪಥ. ಈ ಉದಾತ್ತ ಧ್ಯೇಯದ ಬಗ್ಗೆ ಇರಿಸಿಕೊಳ್ಳುವ ಹೆಮ್ಮೆಯನ್ನು 'ಅಹಂಕಾರ'ವೆಂದು ಅಪಾರ್ಥ ಮಾಡಬಹುದೆ? ಅಂತಹ ತುಚ್ಛವಾದ ವಿಶೇಷಣಗಳನ್ನು ಬಳಸುವ ಭಂಡ ಧೈರ್ಯವುಳ್ಳವನಾದರೂ ಯಾರು? ಅವನನ್ನು ನಾನು ಮೂರ್ಖ ಅಥವಾ ಧೂರ್ತನೆನ್ನುತ್ತೇನೆ. ಆದರೂ ಇಂತಹ ಉದಾತ್ತ ಬದುಕಿನ ಆಳ ಅಗಲಗಳನ್ನು, ಭಾವನೆ ಮತ್ತು ರಸಾಧೀನತೆಯನ್ನು, ಸಂವೇದನೆಗಳ ನಾಡಿಮಿಡಿತವನ್ನು ಅರ್ಥ ಮಾಡಿಕೊಳ್ಳಲಾಗದ ಮೂರ್ಖನನ್ನು ಕ್ಷಮಿಸುತ್ತೇನೆ. ಆತ್ಮವಿಶ್ವಾಸವನ್ನೇ ಉಸಿರಾಗಿಸಿಕೊಂಡಿರುವವರಿಗೆ 'ಅಹಂಕಾರಿ'ಯ ಪಟ್ಟ ಕಟ್ಟಲಾಗುತ್ತದೆ. ಇದು ಖೇದದ, ಶೋಚನೀಯ ಪರಿಸ್ಥಿತಿ......"

ಭಗತ್ ಸಿಂಗ್ ಒಬ್ಬ ಸ್ವೇಚ್ಛಾಚಾರಿ, ಅಹಂಕಾರಿ ಎಂದು ಉದ್ಘರಿಸುವ ಧ್ವನಿಗಳಿಗೆ ಆತನ ಈ ಉತ್ತರ ಬಹಳ ಸ್ಪಷ್ಟವಾಗಿದೆ. ಮುಂದೆ, ತಾನು ನಾಸ್ತಿಕನಾಗಲು, ಅಹಂಕಾರ ಕಾರಣವೋ? ಅಥವಾ ತಾನು ಚಿಂತಿಸುವ ವಿಧಾನವೇ ಕಾರಣವೋ? ಎಂದು ಬಹಳ ತಾರ್ಕಿಕವಾಗಿ ವಿಶ್ಲೇಷಣೆ ನೀಡುತ್ತಾನೆ. ಆತ ಹೇಳುತ್ತಾನೆ "ವಿವೇಚನಾಶಕ್ತಿಯಿರುವ ಯಾವನೇ ವ್ಯಕ್ತಿ ತನ್ನ ಸುತ್ತಮುತ್ತಲಿನ ಪರಿಸರದ ವಿದ್ಯಮಾನಗಳನ್ನು ಕುರಿತು ತರ್ಕಬದ್ಧವಾಗಿ ಚಿಂತಿಸುತ್ತಾನೆ. ನೇರವಾದ ಪ್ರಮಾಣಗಳು ಇಲ್ಲದ ಸಂದರ್ಭದಲ್ಲಿ ತತ್ವಶಾಸ್ತ್ರವು ಬಹುಮುಖ್ಯ ಸ್ಥಾನವನ್ನು ಪಡೆಯುತ್ತದೆ..... ಮಾನವನ ದೌರ್ಬಲ್ಯಗಳ ಫಲವಾಗಿ ಹುಟ್ಟಿಕೊಂಡದ್ದು ತತ್ವಶಾಸ್ತ್ರ. ನಮ್ಮ ಪೂರ್ವಿಕರು ತಮಗೆ ಸಾಕಷ್ಟು ವಿರಾಮ ದೊರೆಯುತ್ತಿದ್ದ ವೇಳೆಗಳಲ್ಲಿ ಈ ಜಗತ್ತಿನ ರಹಸ್ಯ, ಅದರ ಭೂತ, ವರ್ತಮಾನ ಮತ್ತು ಭವಿಷ್ಯತ್ತು, ಹಾಗೂ ಈ ಜಗತ್ತನ್ನು ಕುರಿತ ಏನು, ಏಕೆ ಎಂಬ ಪ್ರಶ್ನೆಗಳನ್ನು ಬಗೆಹರಿಸಲು ಯತ್ನಿಸಿದಾಗ ಅವರಿಗೆ ಪ್ರತ್ಯಕ್ಷ ಸಾಕ್ಷಿಗಳು ದೊರೆಯುವುದು ಅತ್ಯಂತ ಕಠಿಣವಾಗಿದ್ದುದರಿಂದ ಪ್ರತಿಯೊಬ್ಬರೂ ತಮಗಿಷ್ಟ ಬಂದಂತೆ ಈ ಜಗತ್ತನ್ನು ವ್ಯಾಖ್ಯಾನಿಸಲು ಹೊರಟರು. ಅದರ ಫಲವಾಗಿ, ವಿವಿಧ ಧಾರ್ಮಿಕ ಸಂಪ್ರದಾಯಗಳ ಮೂಲಭೂತ ತತ್ವಗಳಲ್ಲಿ ನಾವು ಅಸಾಧ್ಯವಾದ ಅಂತರವನ್ನು ಕಾಣುತ್ತೇವೆ".

ಈ ಮಾತುಗಳೆಲ್ಲ ಭಗತ್‌ಸಿಂಗ್‌ನ ಚಿಂತನೆಯ ಮೂಸೆಯಿಂದ ಹೊರಬಂದವುಗಳು. ಪ್ರತಿಯೊಂದು ಪದವು ಎಷ್ಟು ಅರ್ಥಗರ್ಭಿತವಾಗಿದೆ! ಇಡೀ ತತ್ವ ಶಾಸ್ತ್ರದ ಹುಟ್ಟು, ಬೆಳವಣಿಗೆಯನ್ನೇ ಆತ ಅರ್ಥೈಸಿಕೊಂಡಿದ್ದ ರೀತಿ ನಿಜಕ್ಕೂ ಅಚ್ಚರಿಯೆನಿಸುತ್ತದೆ.

ದೇವರ ಅಸ್ತಿತ್ವವನ್ನು ಪ್ರತಿಪಾದಿಸುವವರನ್ನಷ್ಟೇ ಅಲ್ಲ, ದೇವರ ಅಸ್ತಿತ್ವವನ್ನೇ ಪ್ರಶ್ನಿಸುವ ಅವನ ವಿಚಾರಗಳು, ಅವನ ಧೈರ್ಯ ಎಂತಹವರನ್ನು ಬೆಚ್ಚಿ ಬೀಳಿಸುತ್ತದೆ, ನಿಜವನ್ನರಿಯಲು ಅವಕಾಶ ಮಾಡಿಕೊಡುತ್ತದೆ. ಆತ ಪ್ರಶ್ನಿಸುತ್ತಾನೆ "ಸದಾ ವಿಷಮಯ ಅಶಾಂತಿಯ ತಾಣವಾಗಿರುವ, ನಿಜವಾಗಿಯೂ ಒಂದು ನರಕವಾಗಿರುವ ಜಗತ್ತನ್ನು ಆತ ಏಕೆ ಸೃಷ್ಟಿಸಿದ ಎಂದು ನಿಮ್ಮೊಡನೆ ನಾನು ಕೇಳುತ್ತೇನೆ. ಮಾನವನನ್ನು ಸೃಷ್ಟಿ ಮಾಡದೆ ಇರಬಲ್ಲ ಸಾಮರ್ಥ್ಯವಿದ್ದಾಗ್ಯೂ ಆ ಸರ್ವ ಶಕ್ತ ಅವನನ್ನೇಕೆ ಉಂಟು ಮಾಡಿದ? ಇಲ್ಲಿ ದುಃಖಕ್ಕೊಳಗಾದ ನಿರಪರಾಧಿಗಳಿಗೆ ಪರಲೋಕದಲ್ಲಿ ಪುರಸ್ಕಾರ ನೀಡುವುದಕ್ಕಾಗಿ ಮತ್ತು ಅದೇ ರೀತಿಯಲ್ಲಿ ದುಷ್ಕರ್ಮಿಗಳಿಗೆ ಶಿಕ್ಷೆ ವಿಧಿಸುವ ಸಲುವಾಗಿ ಎನ್ನುವಿರಾ?..... ಇಲ್ಲಿಗೆ ಬರಲಿ ಆ ಭಗವಂತ. ಇಲ್ಲಿನ ಸೆರೆಮನೆಗಳ ಕತ್ತಲೆ ಕೂಪಗಳು, ಕೊಳಗೇರಿಗಳಲ್ಲಿ ಹಾಗೂ ಗುಡಿಸಲುಗಳಲ್ಲಿ ಮಿಲಿಯಗಟ್ಟಲೆ ಮಾನವ ಜೀವಿಗಳನ್ನು ನುಂಗಿ ಹಾಕುತ್ತಿರುವ ಹಸಿವಿನ ಉಗ್ರಾಣಗಳು, ಬಂಡವಾಳಶಾಹಿ ರಕ್ತಪಿಶಾಚಿಗಳು ತಮ್ಮ ನೆತ್ತರನ್ನು ಹೀರುತ್ತಿರುವ ವಿಧಾನವನ್ನು ತಾಳ್ಮೆಯಿಂದ ಅಥವಾ ನಿರಾಸಕ್ತಿಯಿಂದ

ವೀಕ್ಷಿಸುವ ಶ್ರಮಜೀವಿಗಳು, ಒಂದಿಷ್ಟಾದರೂ ಯುಕ್ತಾಯುಕ್ತ ವಿವೇಕವುಳ್ಳ ಯಾವ ಮನುಷ್ಯನನ್ನಾದರೂ ಗಾಬರಿಗೊಲಿಸುವ ರೀತಿಯಲ್ಲಿ ಮಾನವ ಶಕ್ತಿಯನ್ನು ವೃಥಾ ಪೋಲು ಮಾಡುವ ಕ್ರಮಗಳು ಮತ್ತು ಹೆಚ್ಚುವರಿ ಉತ್ಪಾದನೆಯನ್ನು ಕೊರತೆಯಿಂದ ಬಳಲುತ್ತಿರುವ ಉತ್ಪಾದಕರಿಗೆ ವಿತರಣೆ ಮಾಡುವುದಕ್ಕೆ ಬದಲಾಗಿ ಅದನ್ನು ಸಮುದ್ರಕ್ಕೆಸೆಯುವುದೇ ಲೇಸೆಂದು ಬಗೆಯುವ ಕುಸಂಸ್ಕೃತಿ – ಇವುಗಳಿಂದ ತೊಡಗಿ ಮನುಷ್ಯರ ಮೂಳೆಗಳ ಆಸ್ತಿವಾರದ ಮೇಲೆ ಕಟ್ಟಲಾದ ರಾಜಮಹಾರಾಜರ ಅರಮನೆಗಳವರೆಗೆ ಎಲ್ಲವನ್ನೂ ಇಲ್ಲಿಗೆ ಬಂದು ನೋಡಿ ಆಮೇಲೆ ಆತ ಹೇಳಲಿ: ಎಲ್ಲವೂ ಚೆನ್ನಾಗಿದೆ! ಎಂದು!. ಹೀಗೆಲ್ಲ ಏಕೆ ಮತ್ತು ಹೇಗೆ? ಇದೇ ನನ್ನ ಪ್ರಶ್ನೆ".

ಆತನ ಹೃದಯದಲ್ಲಿ ಹುದುಗಿದ್ದ ಮಾನವೀಯತೆಯ ಹಂದರ, ಅಂದಿನ ಅನ್ಯಾಯ, ಅಕ್ರಮಗಳ ಕರಾಳತೆ ಇಂದರಿಂದ ವ್ಯಕ್ತವಾಗುತ್ತದೆ.

ಈ ವಿಷಯಗಳನ್ನೆಲ್ಲಾ ನಾವು ಚರ್ಚಿಸುವಾಗ ಗಮನದಲ್ಲಿಟ್ಟುಕೊಳ್ಳಬೇಕಾದ ಮುಖ್ಯ ಅಂಶವೆಂದರೆ ಭಗತ್ ಹುಟ್ಟು ನಾಸ್ತಿಕನಲ್ಲವೆಂಬುದು. ಆತ ಸಂಪ್ರದಾಯ ಕುಟುಂಬದಿಂದ ಬಂದವನು. ಬಾಲಕನಾಗಿದ್ದಾಗ ಆತ ದೇವರ ಆರಾಧಕನಾಗಿದ್ದು, ಗಂಟೆಗಟ್ಟಲೆ ಗಾಯಿತ್ರಿ ಮಂತ್ರವನ್ನು ಪಠಿಸುತ್ತಿದ್ದ. ತನ್ನ ಈ ಗುಣ ಸ್ವಭಾವದಲ್ಲಿ ಬದಲಾವಣೆ ಹೇಗೆ ಪ್ರಾರಂಭವಾಯಿತೆನ್ನುವುದಕ್ಕೆ ಆತ ಹೇಳುತ್ತಾನೆ "ಅಸಹಕಾರ ಆಂದೋಳನದ ದಿನಗಳಲ್ಲಿ ನಾನು ರಾಷ್ಟ್ರೀಯ ಕಾಲೇಜಿನಲ್ಲಿ ಪ್ರವೇಶ ಪಡೆದುಕೊಂಡೆ. ಇಲ್ಲಿ ಬಂದ ಮೇಲೆಯೇ ದೇವರ ಅಸ್ತಿತ್ವದ ಪ್ರಶ್ನೆಯನ್ನೊಳಗೊಂಡು ಇನ್ನಿತರ ಧಾರ್ಮಿಕ ಸಮಸ್ಯೆಗಳನ್ನು ಕುರಿತು ತುಸು ಉದಾರವಾಗಿ ಯೋಚಿಸಲು ತೊಡಗಿದೆ. ಆದರೂ ಇನ್ನೂ ನಾನೊಬ್ಬ ಪಕ್ಕಾ ಆಸ್ತಿಕನಾಗಿದ್ದೆ. ಅಲ್ಲಿಯವರೆಗೆ ನಾನು ಸಮೃದ್ಧವಾಗಿ ಬೆಳೆದ ನನ್ನ ತಲೆಗೂದಲನ್ನು ಒಪ್ಪ ಓರಣವಾಗಿ ಇಟ್ಟುಕೊಳ್ಳಲು ಶುರು ಮಾಡಿದ್ದೆ. ಆದರೂ ನನಗೆ ಸಿಖ್ ಮತ್ತು ಇನ್ನಿತರ ಧರ್ಮಗಳ ಪ್ರಾಮಾಣಿಕತೆ ಹಾಗೂ ಸಿದ್ಧಾಂತಗಳಲ್ಲಿ ಸಂಶಯ ತಲೆದೋರುತ್ತಿತ್ತು. ಆದರೆ ದೇವರ ಅಸ್ತಿತ್ವದಲ್ಲಿ ಮಾತ್ರ ದೃಢವಾದ ನಿಷ್ಠೆ ಇತ್ತು" ಆತನಲ್ಲಿ ದೇವರ ಬಗ್ಗೆಯಿದ್ದ ಅದಮ್ಯ ನಂಬಿಕೆಯನ್ನು ಪ್ರಶ್ನಿಸುವ ಪ್ರಯತ್ನದ ಲಕ್ಷಣಗಳು ಇಲ್ಲಿ ಎದ್ದು ಕಾಣುತ್ತವೆ.

ಭಗತ್‌ಸಿಂಗ್‌ನ ಪ್ರಕಾರ "ಬಡತನ ಒಂದು ಮಹಾಪರಾಧ. ಅದೊಂದು ಗಂಭೀರ ಪ್ರಶ್ನೆ. ಅನಿವಾರ್ಯವಾಗಿ ಹೆಚ್ಚು ಹೆಚ್ಚು ಅಪರಾಧಗಳನ್ನು ಮಾಡುವಂತೆ ಮನುಷ್ಯನನ್ನು ಪ್ರೇರೇಪಿಸುವ ಶಿಕ್ಷಾ ಕ್ರಮಗಳನ್ನು ಸೂಚಿಸುವ ಅಪರಾಧ ತಜ್ಞ, ನ್ಯಾಯವಾದಿ ಅಥವಾ ಶಾಸಕನ ಪ್ರಯತ್ನವನ್ನು ನೀವು ಎಷ್ಟರಮಟ್ಟಿಗೆ ಮೆಚ್ಚುತ್ತೀರಿ? ಈ ವಿಷಯ ನಿಮ್ಮ ದೇವರಿಗೆ ಗೊತ್ತಿರಲಿಲ್ಲವೆ? ಅಥವಾ ಮನುಕುಲವು ಎದುರಿಸುತ್ತಿರುವ ಅನೂಹ್ಯವಾದ ನೋವು ಸಂಕಟಗಳ ಅನುಭವದಿಂದ ನಿಮ್ಮ ದೇವರು ಇನ್ನೂ ಪಾಠ ಕಲಿಯಬೇಕಾಗಿದೆಯೇ?"

ಹೀಗೆ ಪ್ರಶ್ನಿಸುವ ಮೂಲಕ, ಭಗತ್‌ಸಿಂಗ್ ಇಡೀ ಮನುಕುಲದ ಧಾರ್ಮಿಕ ನಂಬಿಕೆಗಳು, ಅಂಥ ಸಂಪ್ರದಾಯಗಳ ಆಚಾರ ವಿಚಾರಗಳನ್ನು ಚಿಂತನೆಯ ಒರೆಗಲ್ಲಿಗೆ ಹಚ್ಚುತ್ತಾನೆ.

ಮುಂದುವರೆದು ಆತ ಹೇಳುತ್ತಾನೆ "ಬಡತನ ಮತ್ತು ನಿರಕ್ಷರತೆಗಳಿಗೆ ಗುರಿಯಾದ ಒಂದು ಸಂಸಾರದಲ್ಲಿ ಉದಾಹರಣೆಗೆ ಒಬ್ಬ ಚಮ್ಮಾರನ ಅಥವಾ ಕಸ ಗುಡಿಸುವವನ ಕುಟುಂಬದಲ್ಲಿ ಹುಟ್ಟಿದ ಮನುಷ್ಯನ ಗತಿಯ ಬಗ್ಗೆ ನೀವು ಏನು ಹೇಳುವಿರಿ? ಅವನು ಬಡವನಾದ್ದರಿಂದ ವಿದ್ಯಾಭ್ಯಾಸ ಪಡೆಯಲಾರ. ಅವನ ಜಾತಿಗಿಂತ ಮೇಲಿನದೆಂದು ಹೇಳಲಾದ ಜಾತಿಯಲ್ಲಿ ಹುಟ್ಟಿರುವ ಕಾರಣದಿಂದಾಗಿ

ಅವನಿಗಿಂತ ಶ್ರೇಷ್ಠರೆಂದು ಭಾವಿಸಿರುವ ಅವನ ಸಹ ಮಾನವರು ಅವನನ್ನು ದ್ವೇಷಿಸುತ್ತಾರೆ ಹಾಗೂ ದೂರವಿಡುತ್ತಾರೆ. ಅವನ ಅಜ್ಞಾನ, ಅವನ ಬಡತನ ಮತ್ತು ಸಮಾಜದ ಉಳಿದವರು ಅವನೊಂದಿಗೆ ನಡೆದುಕೊಳ್ಳುವ ರೀತಿ ಇವು ಸಮಾಜದತ್ತ ಅವನ ಹೃದಯವನ್ನು ಕಲ್ಲು ಮಾಡುತ್ತವೆ. ಆದ್ದರಿಂದ ಅವನು ಅಪರಾಧವೊಂದನ್ನು ಮಾಡುತ್ತಾನೆಂದುಕೊಳ್ಳಿ. ಅದಕ್ಕೆ ಬಾಧ್ಯರು ಯಾರು? ದೇವರೇ? ಅವನೇ? ಅಥವಾ ಸಮಾಜದ ವಿದ್ಯಾವಂತ ಜನರೇ? ಇಷ್ಟೇ ಅಲ್ಲ, ಒಣ ಪ್ರತಿಷ್ಠೆಯ ಅಹಂಕಾರದಿಂದ ಮೆರೆವ ಬ್ರಾಹ್ಮಣರಿಂದ ಉದ್ದೇಶಪೂರ್ವಕವಾಗಿಯೇ ಅಜ್ಞಾನಾಂಧಕಾರದಲ್ಲಿ ನೂಕಲ್ಪಟ್ಟ ಈ ಜನರು ನಿಮ್ಮ ಪವಿತ್ರ ಗ್ರಂಥವಾದ ವೇದದ ಒಂದೆರಡು ಮಂತ್ರಗಳನ್ನು ಕೇಳಿಸಿಕೊಂಡ ತಪ್ಪಿಗೆ ಕಾದ ಸೀಸವನ್ನು ಕಿವಿಯಲ್ಲಿ ಹೊಯ್ಯಿಸಿಕೊಳ್ಳಬೇಕಾದ • ದಂಡ ತೆರಬೇಕಾಗಿದ್ದುದರ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?......... ಸಮಾಜದಲ್ಲಿ ಸವಲತ್ತುಗಳನ್ನು ಪಡೆದ ಕೆಲವು ಪ್ರತಿಷ್ಠಿತ ಜನರೇ ಈ ಸಿದ್ಧಾಂತಗಳನ್ನು ಸೃಷ್ಟಿಸಿರುವವರು. ತಾವು ಸೆಳೆದುಕೊಂಡಿರುವ ಅಧಿಕಾರ, ಸಂಪತ್ತು, ವೈಭವ ಹಾಗೂ ಶ್ರೇಷ್ಠತೆಯನ್ನು ಸಮರ್ಥಿಸಿಕೊಳ್ಳಲು ಈ ಸಿದ್ಧಾಂತಗಳನ್ನು ಅವರು ಬಳಸಿಕೊಳ್ಳುತ್ತಿದ್ದಾರಷ್ಟೆ. ಹೌದು, ಬಹುಶಃ ಪ್ರಸಿದ್ಧ ಕಾದಂಬರಿಕಾರ ಅಪ್ಟನ್ ಸಿಂಕ್ಲೇರ್ ಎಲ್ಲೋ ಒಂದು ಕಡೆ ಹೇಳಿರುವಂತೆ, ಮನುಷ್ಯನಿಗೆ ಒಮ್ಮೆ ಅಮರತ್ವದಲ್ಲಿ ನಂಬಿಕೆ ಮೂಡಿಸಿದರೆ ಸಾಕು, ನಂತರ ಅವನ ಎಲ್ಲಾ ಆಸ್ತಿ, ಸಂಪತ್ತು, ಗಳಿಕೆಯನ್ನು ದೋಚಬಹುದು. ಅವನು ಅದಕ್ಕೂ ಸಹ ತುಂಬು ಮನಸ್ಸಿನಿಂದ ನಿಮಗೆ ಸಹಾಯ ಮಾಡುತ್ತಾನೆ. ಧರ್ಮೋಪದೇಶಕರ ಮತ್ತು ಅಧಿಕಾರ ಸಂಪನ್ನರ ಒಕ್ಕೂಟವು ಸೆರೆಮನೆ, ನೇಣುಗಂಬ, ಚಾಟಿ ಏಟುಗಳು ಮತ್ತು ಇಂತಹ ಸಿದ್ಧಾಂತಗಳ ಹುಟ್ಟಿಗೆ ಕಾರಣವಾಗಿವೆ."

ಭಗತ್‌ಸಿಂಗ್‌ನ ಈ ಮಾತುಗಳಲ್ಲಿ ಕಮ್ಯುನಿಸಂನ ತೀಕ್ಷ್ಣತೆ ಬಲವಾಗಿ ಕಂಡು ಬಂದರೂ ಹಲವು ಶತಮಾನಗಳಿಂದ ಸಂಪ್ರದಾಯ, ಧರ್ಮದ ಹೆಸರಿನಲ್ಲಿ ನಡೆಯುತ್ತಾ ಬಂದಿರುವ ಶೋಷಣೆ, ಅನ್ಯಾಯಗಳ ಭಾವನೆಯು ಮಡುಗಟ್ಟಿರುವುದು ಸ್ಪಷ್ಟವಾಗಿದೆ. "ಒಬ್ಬ ಮನುಷ್ಯ ಯಾವುದೇ ಒಂದು ಪಾಪ ಅಥವಾ ಅಪರಾಧವನ್ನು ಮಾಡುತ್ತಿರುವಾಗ ಆ ನಿಮ್ಮ ಸರ್ವ ಶಕ್ತ ದೇವರು ಅವನನ್ನು ನಿಲ್ಲಿಸಿ ಹಾಗೆ ಮಾಡದಂತೆ ತಡೆಯುವುದಿಲ್ಲವೇಕೆ?" ಎಂದು ಪ್ರಶ್ನಿಸುವ ಮೂಲಕ ಬ್ರಿಟಿಷ್ ಆಡಳಿತದ ಅಕ್ಟೋಪಸ್ ಹಿಡಿತದಲ್ಲಿ ನಲುಗಿಹೋಗಿರುವ ಇಡೀ ಭಾರತೀಯರನ್ನು ಅಭಿವ್ಯಕ್ತಿಗೊಳಿಸುವ, ವಿಶಿಷ್ಟ ವ್ಯಕ್ತಿಯಾಗಿ ಗೋಚರಿಸುತ್ತಾನೆ.

ಭಗತ್‌ಸಿಂಗ್ ಅಧ್ಯಯನ ಶೀಲ ವ್ಯಕ್ತಿಯಾಗಿದ್ದ. ವಿಶ್ವದ ಶ್ರೇಷ್ಠ ಕ್ರಾಂತಿಕಾರಿಗಳಾದ ಲೆನಿನ್, ಕಾರ್ಲ್ ಮಾರ್ಕ್ಸ್, ಟಾಟ್‌ಸ್ಕಿ, ಬಾಕುನಿನ್ ಮೊದಲಾದವರ ವಿಚಾರಗಳನ್ನು ಪೂರ್ಣವಾಗಿ ಅರಿತಿದ್ದ. ಕಮ್ಯುನಿಸಂ ತತ್ವಗಳಿಂದ ಆತ ಬಹಳ ಪ್ರಭಾವಗೊಂಡಿದ್ದು, ಅವನ ಬದುಕು ಬರಹಗಳಲ್ಲಿ ಇದು ನೇರವಾಗಿ ಕಂಡು ಬರುತ್ತವೆ. ಆತ ಒಬ್ಬ ಪ್ರಜ್ಞಾವಂತ ಕ್ರಾಂತಿಕಾರಿಯಾಗಿದ್ದ. ಆತನಿಗೆ ಕ್ರಾಂತಿಯೆಂದರೆ "ಅಸ್ತಿತ್ವದಲ್ಲಿರುವ ಸಮಾಜದ ವ್ಯವಸ್ಥೆಯನ್ನು, ಅಂದರೆ ಆಳ್ವಿಕೆಯನ್ನು ಸಂಪೂರ್ಣವಾಗಿ ನಿರ್ನಾಮ ಮಾಡಿ ನವೀನ ರೀತಿಯಲ್ಲಿ ಹಾಗೂ ಉತ್ತಮ ಮಾದರಿಯ ಆಧಾರದ ಮೇಲೆ ಕ್ರಮಬದ್ಧವಾದ ಕಾರ್ಯಕ್ರಮಗಳ ಮೂಲಕ ಸಮಾಜದ ಪುನರ್ ನಿರ್ಮಾಣ ಎಂದರ್ಥ. ಹೀಗೆ ಮಾಡುವುದು ಅವಶ್ಯ. ಇಲ್ಲವಾದರೆ ಅದು ಕ್ರಾಂತಿಯಾಗುವುದಿಲ್ಲ" ಆತನಿಗೆ ತಾನು ಮಾಡುತ್ತಿದ್ದ ಕಾರ್ಯದಲ್ಲಿ ಸ್ಪಷ್ಟತೆಯಿತ್ತು. ಆಳವಾದ ಅಧ್ಯಯನ, ಚಿಂತನೆ, ಚರ್ಚೆ ನಂತರದ ಅಭಿಪ್ರಾಯಗಳು ಆತನ ಪ್ರತಿ ಮಾತುಗಳನ್ನೂ ಕತ್ತಿಯಿಂದ ತುಂಡರಿಸಿದಷ್ಟು ಖಚಿತವಾಗಿ ಹೊರಹೊಮ್ಮಿಸುತ್ತಿದ್ದವು.

ನಾವು ಮಾಡುವ ಯಾವುದೇ ಕಾರ್ಯದಲ್ಲೂ ಅಚಲವಾದ ನಂಬಿಕೆ, ಸ್ಪಷ್ಟ ಅಭಿಪ್ರಾಯವಿರಬೇಕು ಎಂಬುದಕ್ಕೆ ಭಗತ್‌ಸಿಂಗ್‌ನ ಜೀವನದ ಒಂದು ಘಟನೆ ಉತ್ತಮ ಉದಾಹರಣೆಯಾಗಿದೆ. ಆತ ಜೈಲಿನಲ್ಲಿ ಕಡೆಯ ದಿನಗಳನ್ನು ಕಳೆಯುತ್ತಿದ್ದಾನೆ. ತೀರ್ಪು ಪ್ರಕಟಗೊಂಡಿದೆ. ಇದನ್ನು ತಿಳಿದ ಜೈಲಿನ ವಾರ್ಡನ್ ಚಿತ್ತಾರ್‌ಸಿಂಗ್ ಬಂದು ಭಗತ್‌ನನ್ನು ಪಿತೃವಾತ್ಸಲ್ಯದಿಂದ ಕೇಳುತ್ತಾರೆ : "ಮಗೂ, ನಿನ್ನ ಜೀವನದ ಕೊನೆ ಗಳಿಗೆ ಹತ್ತಿರವಾಗುತ್ತಿದೆ. ನಾನೂ ನಿನ್ನ ತಂದೆಯಂತಿದ್ದೇನೆ. ನನ್ನದೊಂದು ಮನವಿಯನ್ನು ನಡೆಸಿಕೊಡುವೆಯಾ?" ಅದಕ್ಕೆ ಭಗತ್ ಸಿಂಗ್ "ನಾನು ಏನು ಮಾಡಬೇಕೆಂಬುದನ್ನು ಹೇಳಿ" ಎನ್ನುತ್ತಾನೆ. ಚಿತ್ತಾರ್ ಸಿಂಗ್ ಹೇಳುತ್ತಾರೆ "ನಿನ್ನ ಜೀವನದುದ್ದಕ್ಕೂ ನೀನೆಂದೂ ದೇವರನ್ನು ಪ್ರಾರ್ಥಿಸಿಲ್ಲ. ಈಗ ಕೊನೆಯ ಘಳಿಗೆ ಹತ್ತಿರವಾಗುತ್ತಿದೆ. ಆದ್ದರಿಂದ ನೀನು ದೇವರನ್ನು ಒಮ್ಮೆಯಾದರೂ 'ವಾಹೇ ಗುರು' ಎಂದು ಪ್ರಾರ್ಥಿಸಬೇಕು. ಆತನ ಕೃಪೆಯನ್ನು ಯಾಚಿಸಬೇಕು".

ಈ ಮಾತನ್ನು ಕೇಳಿ ಭಗತ್ ಸಿಂಗ್ ಗಟ್ಟಿಯಾಗಿ ನಕ್ಕು ಹೇಳುತ್ತಾನೆ "ನಿಮ್ಮ ವಿನಂತಿಯನ್ನು ಮಾನ್ಯ ಮಾಡಲು ನನಗೇನೂ ಕಷ್ಟವಾಗುತ್ತಿರಲಿಲ್ಲ ನೋಡಿ. ಆದರೆ ಅದನ್ನು ಇನ್ನೂ ಬಹು ಮುಂಚೆಯೇ ತಿಳಿಸಲಿಲ್ಲವೇಕೆ? ಈಗ ಕಡೆಯ ಘಳಿಗೆ ಬಂದಿದೆ. ಈಗ ನಾನು ಪರಮಾತ್ಮನ ನಾಮಸ್ಮರಣೆ ಮಾಡಿದರೆ ಅವನೇನೆಂದಾನು? 'ಹಾ! ನೀನೂ ಕಡೆಗೆ ಪುಕ್ಕಲನಾದೆಯಾ' ಎಂದಾನು. ಇಡೀ ಜೀವನದಲ್ಲಿ ಇವನು ನನ್ನನ್ನು ನೆನೆಯಲಿಲ್ಲ. ಈಗ ಸಾಯುವ ಕಾಲ ಬಂದಿದೆ. ಅದನ್ನು ಎದುರಿಸಲಾರದೆ ನನ್ನ ಮೊರೆ ಹೋಗುತ್ತಿದ್ದಾನೆ ಎಂದಾನಲ್ಲವೆ? ಆದ್ದರಿಂದ ನನಗೆ ಮಾರ್ಗ ಇದೇ. ನಾನು ಜೀವನವನ್ನು ಹೇಗೆ ಕಳೆದೆನೋ ಹಾಗೆ ಸಾವನ್ನೂ ಅಪ್ಪುವುದು. ನನ್ನನ್ನು ಕೆಲವರು ನಾಸ್ತಿಕನೆಂದು ಮೂದಲಿಸಬಹುದು. ನಿಜ, ಆದರೆ ಭಗತ್ ಸಿಂಗ್ ಸಾಯುವ ವೇಳೆಯಲ್ಲಿ ನಡುಗಲಾರಂಭಿಸಿದ ಎಂದು ಯಾರೂ ದೂಷಿಸಲಾರರಲ್ಲವೆ?" ಎಂದ.

ಅಬ್ಬ! ಎಂತಹ ಧೈರ್ಯದ ಮಾತುಗಳು. ಎಷ್ಟು ಅಧಮ್ಯ ನಿಲುವು. ಭಗತ್‌ಸಿಂಗ್ ಬರಿಯ ಮಾತಿನಲ್ಲಷ್ಟೆ ಅಲ್ಲ ಜೀವನದಲ್ಲಿಯೂ ಅಷ್ಟೇ ಉದಾತ್ತ ನಿಲುವನ್ನು ಹೊಂದು ಅಮರನಾದವನು. ಅವನಲ್ಲಿದ್ದ ವಿಚಾರ ಸ್ಪಷ್ಟತೆ, ಧೈರ್ಯದ ಒಂದು ತುಣುಕು ಅವನ ಜೀವನ ಚರಿತ್ರೆಯನ್ನು ಓದಿದ ಮೇಲಾದರೂ ನಾವು ಮೈಗೂಡಿಸಿಕೊಂಡರೆ ಅಸಾಧ್ಯವನ್ನು ಸಾಧ್ಯವಾಗಿಸಬಹುದು. ಒಬ್ಬ ವ್ಯಕ್ತಿಯ ಜೀವನ ಮತ್ತೊಬ್ಬರಿಗೆ ಮಾದರಿಯಾಗಿ ನಿಲ್ಲಬಲ್ಲದೆಂದು ಗುರುತಿಸುವಲ್ಲೇ ಆತನ ಉದಾತ್ತ ಗುಣಗಳು ಅಡಗಿವೆ. ಆತನಿಗೆ ಚಿರಋಣಿಯಾಗಿರಲು, ನಮನ ಸಲ್ಲಿಸಲು, ಇದಕ್ಕಿಂತ ಉತ್ತಮ ಮಾರ್ಗ ಬೇರೊಂದಿಲ್ಲ.

ನಾನು ಸ್ವಾರ್ಥದ ಕಾರಣಕ್ಕಾಗಿ ಪ್ರಾರ್ಥನೆ ಮಾಡುವುದಿಲ್ಲ ಎನ್ನುವ ಭಗತ್‌ನ ಹೃದಯ ಶ್ರೀಮಂತಿಕೆ ಅನುಕರಣೀಯವಾದುದು.

ಅಧ್ಯಾಯ ೩

# ಮನನ ಮಾಡಬೇಕಾದ ಮಾತುಗಳು

೧. ವಿಮರ್ಶೆ ಮತ್ತು ಸ್ವತಂತ್ರ ಚಿಂತನೆ ಇವೆರಡೂ ಒಬ್ಬ ಕ್ರಾಂತಿಕಾರಿಗೆ ಇರಬೇಕಾದ ಅತ್ಯಗತ್ಯ ಗುಣಗಳು

೨. ಕುರುಡಾಗಿ ಅನುಸರಿಸುವ ಉದ್ದೇಶದಿಂದ 'ನಾನೇಕೆ ನಾಸ್ತಿಕ' ಕೃತಿಯನ್ನು ಓದಬೇಡಿ. ಇದರಲ್ಲಿ ಬರೆದಿರುವುದನ್ನೆಲ್ಲಾ ಪ್ರಶ್ನಾತೀತವೆಂದು ಹಾಗೆಯೇ ಸ್ವೀಕರಿಸಬೇಡಿ. ಇದನ್ನು ಓದಿರಿ, ವಿಮರ್ಶಿಸಿರಿ ಹಾಗೂ ಅದರ ಬಗ್ಗೆ ಚಿಂತಿಸಿರಿ. ಅನಂತರ ಅದರ ನೆರವಿನಿಂದ ನಿಮ್ಮ ಸ್ವಂತ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಿ

೩. ತರ್ಕವು ಜೀವನದ ಮಾರ್ಗದರ್ಶಿ ಸೂತ್ರವಾಗಿರುತ್ತದೆ. ಆದರೆ ಕೇವಲ ಶ್ರದ್ಧೆ ಅಥವಾ ಅಂಧಶ್ರದ್ಧೆ ಅಪಾಯಕಾರಿಯಾದದ್ದು, ಅದು ಚಿಂತನ ಶಕ್ತಿಯನ್ನು ಮಂದಗೊಳಿಸುತ್ತದೆ, ಮನುಷ್ಯನನ್ನು ಪ್ರತಿಗಾಮಿಯನ್ನಾಗಿಸುತ್ತದೆ.

೪. ಸುಧಾರಣಾತ್ಮಕ ಸಿದ್ಧಾಂತವೊಂದೇ ಮೂಲಭೂತವಾದ ಮತ್ತು ಮಾನವ ಪ್ರಗತಿಗೆ ಅನಿವಾರ್ಯವಾದ ಸಿದ್ಧಾಂತವಾಗಿದೆ.

೫. ಎಲ್ಲ ನಂಬಿಕೆ, ಧರ್ಮ, ಜಾತಿ, ಮತ ಮತ್ತು ಅಂತಹ ಸಂಸ್ಥೆಗಳು ಕಾಲಕ್ರಮದಲ್ಲಿ ಪ್ರಜಾಪೀಡಕ ಮತ್ತು ಶೋಷಕ ಸಂಸ್ಥೆಗಳ ಜನರ ಮತ್ತು ವರ್ಗಗಳ ಬೆಂಬಲಿಗರಾಗಿ ಪರಿವರ್ತನೆಗೊಂಡವು.

೬. ನಾಸ್ತಿಕವಾದಿಗಳು ಜೀವನದ ಎಲ್ಲ ಸಮಸ್ಯೆಗಳನ್ನು ಬಹಳ ದಿಟ್ಟತನದಿಂದ ಎದುರಿಸಿರುವುದನ್ನು ನಾನು ಓದಿ ತಿಳಿದುಕೊಂಡಿದ್ದೇನೆ.

೭. ಮನುಕುಲದ ಸೇವೆಗಾಗಿ ಮತ್ತು ದುಃಖಪೀಡಿತ ಜನತೆಯ ವಿಮೋಚನೆಗಾಗಿ ತಮ್ಮ ಬದುಕನ್ನು ಧಾರೆ ಎರೆಯುವ ಮನೋಭಾವವುಳ್ಳ ಸ್ತ್ರೀಯರು ಮತ್ತು ಪುರುಷರು ಹೆಚ್ಚು ಸಂಖ್ಯೆಯಲ್ಲಿ ದೊರೆತ ದಿನವೆಂದು ಸ್ವಾತಂತ್ರ್ಯದ ಯುಗ ಆರಂಭವಾಗುತ್ತದೆ.

೮. ಕ್ರಾಂತಿಕಾರಿಗಳು ತಮ್ಮ ಉದ್ದೇಶದ ಪೂರ್ತಿಕೆಗೆ ವಿಧ್ಯಾಭ್ಯಾಸವನ್ನು ಏಕೈಕ ಆಯುಧವನ್ನಾಗಿ ಬಳಸಬೇಕು.

೯. ಸೆರೆಮನೆಗಳು ಸುಧಾರಣಾ ಸ್ಥಳಗಳಾಗಬೇಕೆ ಹೊರತು ನರಕಗಳೆನಿಸಿಕೊಳ್ಳಬಾರದು.

೧೦. ಸಮಾಜವಾದಿ ಸಮಾಜದಲ್ಲಿ ಜಾರಿಗೆ ಬರಲಿರುವ ವ್ಯತ್ಯಾಸವೆಂದರೆ, ಬುದ್ಧಿಜೀವಿಗಳನ್ನು ಯಾವ ಕಾರಣಕ್ಕೂ ಶ್ರಮಜೀವಿಗಳಿಗಿಂತ ಮೇಲ್ಪಟ್ಟವರೆಂದು ಭಾವಿಸಲಾಗುವುದಿಲ್ಲ.

೧೧. ಪ್ರತಿಯೊಬ್ಬನೂ ತನ್ನ ಧರ್ಮಗಳ ನಂಬಿಕೆಗಿಂತ ಮಿಗಿಲಾಗಿ ದೇಶದ ಹಿತ ಸಾಧನೆಗಾಗಿ ಶ್ರಮಿಸುವುದಾಗಿ ಪ್ರತಿಜ್ಞೆ ಮಾಡಬೇಕು.

೧೨. ಕ್ರಾಂತಿಯನ್ನು ಖಂಡಿಸುವ ಕೆಲವರು ಬಾಂಬ್, ಪಿಸ್ತೂಲು, ಕತ್ತಿ, ರಕ್ತಗಳೇ ಕ್ರಾಂತಿ ಎಂದು ತಪ್ಪಾಗಿ ಗ್ರಹಿಸಿದ್ದಾರೆ.

೧೩. ಕ್ರಾಂತಿಯೆಂದರೆ ಅಸ್ತಿತ್ವದಲ್ಲಿರುವ ಮನುಷ್ಯ ಮನುಷ್ಯನಿಂದಲೇ ಶೋಷಣೆಗೆ ಒಳಗಾಗುತ್ತಿರುವುದನ್ನು ಅಂತ್ಯಗೊಳಿಸಿ ಕ್ರಮಬದ್ಧ ಕಾರ್ಯಕ್ರಮಗಳ ಮೂಲಕ ಸಮಾಜದ ಪುನರ್ ನಿರ್ಮಾಣ ಎಂದರ್ಥ.

# ಅನುಬಂಧ

"........ನ ಶೂದ್ರಸ್ಯ ಅಧಿಕಾರಃ। ಯದಸ್ಯ ಸ್ಮೃತೇಃ ಶ್ರವಣಾಧ್ಯಯನಾರ್ಥ ಪ್ರತಿಷೇಧೋ ಭವತಿ। ವೇದ ಶ್ರವಣ ಪ್ರತಿಷೇಧಃ ವೇದಾಧ್ಯಯನ ಪ್ರತಿಷೇಧಃ ತದರ್ಥ ಜ್ಞಾನಾನುಷ್ಠಾನಯೋಶ್ಚ ಪ್ರತಿಷೇಧಃ ಶೂದ್ರಸ್ಯ ಸ್ಮರ್ಯತೇ। ಶ್ರವಣ ಪ್ರತಿಷೇಧ ಸ್ತಾವತ್ ಅಥಾಸ್ಯ ವೇದ ಮುಪಶೃಣ್ವತಸ್ತ್ರಪುಜತುಭ್ಯಾಂ ಶ್ರೋತ್ರ ಪ್ರತಿಪೂರಣಂ(ಗೌ.ಧ.ವಿ.೩.೪) ಇತಿ। ಪದ್ಯುಹವಾ ಏತತ್ ಸ್ಮಶಾನಂ ಯತ್ ಶೂದ್ರಃ ತಸ್ಮಾತ್ ಶೂದ್ರ ಸಮೀಪೆ ನಾಧ್ಯೇತವ್ಯಂ(ಆಪಸ್ತಂಭ ದರ್ಮಸೂತ್ರ ೧.೩.೯.೯) ಇತಿ ಚ। ಅತ ಏನಾಧ್ಯಯನ ಪ್ರತಿಷೇಧಃ। ಯಸ್ಯ ಹಿ ಸಮೀಪೇಪಿ ನಾಧ್ಯೇತವ್ಯಂ ಭವತಿಸ ಕಥಮಶ್ರುತಮ್ ಅಧಿಯೀತ ಭವತಿ ಚ। ವೇದೋಚ್ಚಾರಣೇ ಜಿಹ್ವಾಚ್ಛೇದೋ ಧಾರಣೇ ಶರೀರ ಬೇಧಃ (ಗೌ.ಧ.೨.೩.೪) ಇತ। ಅತ ಏನ ಚ ಅರ್ಥಾತ್ ಅರ್ಥಜ್ಞಾನಾನುಷ್ಠಾಯೋನಃ ಪ್ರತಿಷೇಧೋ ಭವತಿ। ನ ಶೂದ್ರಾಯ ಮತಿಂ ದದ್ಯಾತ್ (ಮನು ೪ ೮೦) ದ್ವಿಜಾತೀಯ ನಾಮಧ್ಯಯನಮಿಜ್ಯಾದಾನಂ (ಗೌ.ಧ. ೨.೧.೧) ಇತಿ ಚ।

("ಶೂದ್ರನಿಗೆ ಅಧಿಕಾರವಿಲ್ಲ. ಏಕೆಂದರೆ ವೇದ ಶ್ರವಣ ಮತ್ತು ಅಧ್ಯಯನ ಆತ ಮಾಡಕೂಡದೆಂದು ಸ್ಮೃತಿ ಕಟ್ಟಪ್ಪಣೆ ಮಾಡಿದೆ. ಶೂದ್ರನು ವೇದವನ್ನು ಕೇಳಕೂಡದೆಂದೂ ವೇದವನ್ನು ಓದಕೂಡದೆಂದೂ ಅರ್ಥವನ್ನು ತಿಳಿದುಕೊಳ್ಳಕೂಡದೆಂದೂ ಅನುಷ್ಠಾನ ಮಾಡಕೂಡದೆಂದೂ ಸ್ಮೃತಿ ಹೇಳುತ್ತದೆ. ಹಾಗೇನಾದರೂ ಆತ ವೇದವನ್ನು ಕೇಳಿದರೆ ಕರಗಿಸಿದ ಸೀಸ ಮತ್ತು ಅರಗುಗಳಿಂದ ಅವನ ಕಿವಿಯನ್ನು ತುಂಬಿ ಬಿಡಬೇಕು (ಗೌ.ಧ.೨.೩.೪) ಶೂದ್ರನೆಂದರೆ ಸಂಚರಿಸುವ ಸ್ಮಶಾನ. ಆದ್ದರಿಂದ ಅವನ ಬಳಿಯಲ್ಲಿ ಅಧ್ಯಯನ ಮಾಡಬಾರದು. (ಆಪಸ್ತಂಭ ಧರ್ಮಸೂತ್ರ ೧.೩.೯.೯) ಈ ಕಾರಣದಿಂದಲೂ ಅಧ್ಯಯನವನ್ನು ನಿಷೇಧಿಸಿದೆ ಎನ್ನಬೇಕು. ಏಕೆಂದರೆ ಯಾರ ಹತ್ತಿರ ಆತ ಅಧ್ಯಯನ ಮಾಡಬಾರದಾಗಿರುವುದೋ ಆತ ಶ್ರವಣ ಮಾಡದಿರುವುದನ್ನು ಹೇಗೆ ತಾನೇ ಅಧ್ಯಯನ ಮಾಡಬಲ್ಲ? ವೇದೋಚ್ಚಾರಣೆಯನ್ನು ಮಾಡಿದರೆ ನಾಲಗೆಯನ್ನು ಕತ್ತರಿಸಿ ಹಾಕಬೇಕು. ಕಂಠಪಾಠ ಮಾಡಿ ಹೃದಯ ಸೇರಿಬಿಟ್ಟಿದ್ದರೆ ಆ ದೇಹವನ್ನೇ ಕತ್ತರಿಸಿ ಬಿಡಬೇಕು(ಗೌ.ಧ. ೨.೩.೪) ಎಂದೂ ಸ್ಮೃತಿ ಇದೆ. ಆದ್ದರಿಂದಲೇ ಅರ್ಥಜ್ಞಾನ ಮತ್ತು ಅನುಷ್ಠಾನ ಇವೆರಡನ್ನೂ ಅರ್ಥವಶದಿಂದ ಪ್ರತಿಷೇಧ ಮಾಡಿದಂತಾಗುತ್ತದೆ. ಶೂದ್ರನಿಗೆ ಜ್ಞಾನವನ್ನು ಕೊಡಬಾರದು ಎಂದು ಮನು(೪.೮೦) ಹೇಳುತ್ತಾನೆ. ದ್ವಿಜರಿಗೆ ಮಾತ್ರ ಅಧ್ಯಯನ, ಯಾಗ, ದಾನ ಉಂಟು ಎಂದು (ಗೌ.ಧ.೨.೧.೧) ಸ್ಮೃತಿ ನುಡಿಯುತ್ತದೆ)

ಶ್ರೀ ಶಂಕರಾಚಾರ್ಯರ ಗ್ರಂಥಗಳು, ಬ್ರಹ್ಮಸೂತ್ರ ಭಾಷ್ಯ, ಸಂಪುಟ ೧ ಅನು: ಶ್ರೀ ಸಚ್ಚಿದಾನಂದ ಸರಸ್ವತೀ ಸ್ವಾಮಿಗಳವರು(ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ, ೧೯೫೦, ಅಧ್ಯಾಯ ೧, ಪಾದ ೩, ಅಧಿಕರಣ ೯, ಸೂತ್ರ ೩೮, ಪುಟ ೫೧೫-೫೧೬.

ಹೆಚ್ಚಿನ ವಿವರಕ್ಕೆ ಡಾ। ಕೆ.ಎಸ್. ಭಗವಾನ್ ಅವರ ಶಂಕರಾಚಾರ್ಯ ಮತ್ತು ಪ್ರತಿಗಾಮಿನತ ಮಹಿಮ ಪ್ರಕಾಶನ, ಕುವೆಂಪು ನಗರ, ಮೈಸೂರು ಕೃತಿಯನ್ನು ಗಮನಿಸಿ.

## ಗ್ರಂಥ ಋಣ

೧. **ಭಗತ್ ಸಿಂಗ್** — ಡಾ॥ ಜಿ. ರಾಮಕೃಷ್ಣ
೨. **ಸರ್ದಾರ್ ಭಗತ್ ಸಿಂಗ್** — ಸೋ.ಮು. ಭಾಸ್ಕರಾಚಾರ್
೩. **ಸರ್ದಾರ್ ಭಗತ್ ಸಿಂಗ್** — ಮೋಹನ್ ಮಟ್ಟನವಿಲೆ
೪. **ನಾನೇಕೆ ನಾಸ್ತಿಕ** — ಭಗತ್ ಸಿಂಗ್, ಅನು:ಎನ್. ಗಾಯಿತ್ರಿ
೫. **ವಿಶ್ವ ಕೋಶ** — ಮೈಸೂರು ವಿಶ್ವವಿದ್ಯಾಲಯ

## ದೇಶ ತಿಳಿಯೋಣ - ದೇಶ ಬದಲಿಸೋಣ

## ಸ್ವಾತಂತ್ರ್ಯೋತ್ಸವ - 50 ಆಚರಣಾ ಸಮಿತಿಯ ಉದ್ದೇಶಗಳು.

1. ವಿದ್ಯಾರ್ಥಿಗಳಿಗೆ, ಯುವ ಜನರು ಹಾಗೂ ಜನಸಾಮಾನ್ಯರಲ್ಲಿ ರಾಷ್ಟ್ರಪ್ರೇಮ ಹಾಗೂ ರಾಷ್ಟ್ರನಾಯಕರಲ್ಲಿ ಗೌರವ ಮೂಡಿಸುವುದು.
2. ವಿಜ್ಞಾನ ಚಟುವಟಿಕೆಗಳಲ್ಲಿ ಆಸಕ್ತಿ ಮೂಡಿಸುವುದು ಹಾಗೂ ವೈಜ್ಞಾನಿಕ ಮನೋಭಾವ ಬೆಳೆಸುವುದು. ವಿಚಾರ ಸಂಕಿರಣ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ನಮ್ಮ ಸ್ವಾತಂತ್ರ್ಯ ಹೋರಾಟದ ವಿವಿಧ ಆಯಾಮಾಗಳ ಪರಿಚಯ ಮೂಡಿಸುವುದು.
3. ಚಟುವಟಿಕೆಯಾಧಾರಿತ ಹಾಗೂ ಸಂತಸ ಕಲಿಕೆಯ ಭೋದನೆಗೆ ಒತ್ತು ನೀಡುವುದು.
4. ಶಾಲೆಗಳಲ್ಲಿರುವ ವಿಜ್ಞಾನ ಹಾಗೂ ಕಲಾ ಸಂಘಗಳನ್ನು ಕ್ರಿಯಾಶೀಲಗೊಳಿಸುವುದು ಮತ್ತು ಅವುಗಳನ್ನು ಅಸ್ತಿತ್ವಕ್ಕೆ ತರುವುದು.
5. ಮೇಲಿನ ಉದ್ದೇಶಗಳಿಗೆ ಸಹಾಯವಾಗುವಂತೆ ಪ್ರಕಟನೆಗಳನ್ನು ಹೊರತರುವುದು.
6. ಸಮಾಜದ ಅಭಿವೃದ್ಧಿಯಲ್ಲಿ ವಿವಿಧ ಜನ ತೊಡಗುವಂತೆ ಮಾಡುವುದು.

## ಭಾರತ ಜ್ಞಾನ ವಿಜ್ಞಾನ ಸಮಿತಿಯ ಉದ್ದೇಶಗಳು

1. ಮೊದಲಿನಿಂದಲೂ ಜನರ ಬೆಂಬಲವನ್ನು ಸಂಪೂರ್ಣ ಸಾಕ್ಷರತಾ ಆಂಧೋಲನಕ್ಕೆ ಒದಗಿಸಿಕೊಡುವುದು.
2. ಯೋಜನೆಯ ಎಲ್ಲಾ ಹಂತಗಳಲ್ಲೂ ಸಹಕರಿಸುವುದು - ಜನರನ್ನು, ಪರಿಸರವನ್ನು ಯೋಜನೆಯ ಸಹಾಯಕ್ಕೆ ತಿರುಗಿಸುವುದು - ತರಬೇತಿ ನೀಡುವುದು, ಜನರ ಬೆಂಬಲವನ್ನು ಬಲಗೊಳಿಸಿ ಕಾಯ್ದಿರಿಸುವುದು.
3. ಸತತವಾಗಿ ಅಧಿಕಾರಿಗಳ, ರಾಜಕಾರಣಿಗಳ, ಸ್ವಯಂ ಸೇವಾ ಸಂಘಗಳ, ಕಾರ್ಮಿಕ ಸಂಘಗಳ, ಬುದ್ಧಿಜೀವಿಗಳ ಸಂಪರ್ಕವಿಟ್ಟುಕೊಂಡು ಸಾಕ್ಷರತಾ ಆಂದೋಲನಕ್ಕೆ ಪ್ರೋತ್ಸಾಹ ಮತ್ತು ಸಹಾಯವನ್ನು ನೀಡುವುದು.
4. ಜಿಲ್ಲೆಗಳಲ್ಲಿ ಮತ್ತು ರಾಜ್ಯಗಳಲ್ಲಿ ಭಾರತ ಜ್ಞಾನ ವಿಜ್ಞಾನ ಸಮಿತಿಯ ಕೇಂದ್ರಗಳನ್ನು ತೆರೆದು ಸಾಕ್ಷಾರತಾ ಆಂದೋಲವನ್ನು ಸ್ಥಿರಗೊಳಿಸುವುದು, ಇದರಿಂದ ಸಾಕ್ಷರತಾ ಕಾರ್ಯಕ್ರಮದ ನಂತರವೂ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ, ಮಹಿಳೆಯರ ಅಭಿವೃದ್ಧಿ, ಆರೋಗ್ಯ ಸಾಂಸ್ಕೃತಿಕ ಜಾಗೃತಿ ಮುಂದುವರಿಸಲು ಸಹಾಯಮಾಡಲಾಗುವುದು. ಸಂಘಟನೆಗಳನ್ನು ರಚಿಸುವುದು ಮತ್ತು ಜನರೊಂದಿಗೆ ವಿಶ್ವಾಸದಿಂದ ಸಂಪರ್ಕ ಹೊಂದಿರುವುದು, ಪ್ರಜಾಪ್ರಭುತ್ವದಲ್ಲಿ ಜನರನ್ನು ಅಭಿವೃದ್ಧಿಯ ಕಡೆಗೆ ಸೆಳೆದೊಯ್ಯಲು ಸಹಾಯಕವಾಗುವುದು.

ಬೆಲೆ ರೂ. 12/-